# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಶನೀಶ್ವರ ಮಹಾತ್ಮೆ

ಕವಿ

## ಸೀತಾನದಿ ಗಣಪಯ್ಯ ಶೆಟ್ಟಿ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಗೊತ್ತಿಲ್ಲ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಸುಬೋಧ ಸಾಹಿತ್ಯ ಭಂಡಾರ, ಹಿರಿಯಡಕ ಇವರಿಂದ ೧೯೭೭ರಲ್ಲಿ ಪ್ರಕಟಿತ ಕೃತಿ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೫೪

**ಪಾತ್ರಗಳು:**

ವಿಷ್ಣು, ನಾರದ, ಶನಿ, ಈಶ್ವರ, ಬೃಹಸ್ಪತಿ, ತೇಜವತಿ ರಾಜ, ಸತ್ಯಶೇಖರ, ಸತ್ಯಸುವ್ರತ ಕೃಷಿಕ, ವಿಕ್ರಮಾದಿತ್ಯ, ಬೇತಾಳ, ಕಾಪಾಲಿಕ, ಪಂಡಿತರು, ವಿಭಾಕರ, ಕುದುರೆ ವ್ಯಾಪಾರಿ, ನಂದಿ ಶೆಟ್ಟಿ, ಆಲೋಲಿಕ, ಚಂದ್ರಸೇನ, ಪದ್ಮಾವತಿ

**ಕಥಾ ಸಾರಾಂಶ:**

ಶ್ರೀಹರಿ ವೈಕುಂಠದಲ್ಲಿರುವಾಗ ನಾರದರ ಪ್ರವೇಶ. ಬಂದ ಕಾರಣವನ್ನು ಕೇಳಲು, ಲೋಕದಲ್ಲಿ ದುರ್ಜನರೇ ತುಂಬಿದ್ದು, ಹಣದ ಲಾಲಸೆಯಿಂದ ಧರ್ಮವನ್ನೇ ಹಾಳು ಮಾಡುತ್ತಿದ್ದಾರೆ ಎನ್ನುತ್ತಾನೆ. ಇದಕ್ಕೆ ಶ್ರೀಹರಿಯು ತನ್ನ ಮನದ ಸಂಕಲ್ಪದಂತೆ ಛಾಯೆಯಲ್ಲಿ ಸುಕುಮಾರನೊಬ್ಬ ಹುಟ್ಟಿ, ಶನಿ ಎಂಬ ಹೆಸರಿನಿಂದ ಕರೆಯಲ್ಪಟ್ಟು ಈ ಕಷ್ಟಗಳನ್ನು ಪರಿಹರಿಸುತ್ತಾನೆ ಎನ್ನುತ್ತಾನೆ. ಮುಂದೆ ಶನಿಯು ಸೂರ್ಯ ಹಾಗೂ ಛಾಯೆಯಲ್ಲಿ ಜನಿಸಿ ತನ್ನ ತಂದೆಯನ್ನು ಮೊದಲ್ಗೊಂಡು ಪರಶಿವ, ಬೃಹಸ್ಪತಿಯನ್ನೂ ಕಾಡುತ್ತಾನೆ.

ಮುಂದೆ ಉಜ್ಜಯಿನಿಯ ವಿಕ್ರಮಾದಿತ್ಯ ತನ್ನ ಸಭೆಯಲ್ಲಿ ಶನಿಯ ಬಗ್ಗೆ ಕೀಳಾಗಿ ಮಾತನಾಡುವುದನ್ನು ಕೇಳಿಸಿಕೊಂಡ ಆಕಾಶದಲ್ಲಿ ಸಂಚರಿಸುತ್ತಿದ್ದ ಶನಿ ವಿಕ್ರಮನ ಅವನ ಆಸ್ಥಾನಕ್ಕೆ ಬಂದು ತನ್ನ ಪ್ರಭಾವದಿಂದ ರಾಜನು ತನಗೆ ಶರಣಾಗುವಂತೆ ಮಾಡುತ್ತೇನೆ ಎಂದು ಹೇಳಿ ಅದೃಶ್ಯನಾಗುತ್ತಾನೆ.

ಹೀಗಿರುವಾಗ ಒಂದು ದಿನ ಯವನ ದೇಶದ ಕುದುರೆ ವ್ಯಾಪಾರಿ ವಿಕ್ರಮಾದಿತ್ಯನ ಆಸ್ಥಾನಕ್ಕೆ ಬಂದು ತನ್ನಲ್ಲಿರುವ ವಿಶಿಷ್ಟವಾದ ಕುದುರೆಯ ಬಗ್ಗೆ ತಿಳಿಸುತ್ತಾನೆ. ಕೊಳ್ಳುವ ಮೊದಲು ಪರೀಕ್ಷಿಸಲು ಕುದುರೆಯನ್ನೇರಿದ ವಿಕ್ರಮಾದಿತ್ಯನನ್ನು ಕುದುರೆ ಘೋರಾರಣ್ಯದಲ್ಲಿ ಕೆಡವಿ ಮಾಯವಾಗುತ್ತದೆ. ಆ ಸಮಯದಲ್ಲಿ ಕಳ್ಳರು ಅವನ ರತ್ನಾಭರಣವನ್ನು ಅಪಹರಿಸುತ್ತಾರೆ. ಅನ್ನ ನೀರು ಇಲ್ಲದೆ ಸೊರಗುತ್ತಾನೆ. ಹರಿವ ನದಿಗಿಳಿದು ನೀರನ್ನು ಕುಡಿಯಲು ಯತ್ನಿಸಿದರೆ, ಕಾಲು ಜಾರಿ ನದಿಗೆ ಬಿದ್ದು ಪ್ರವಾಹದಲ್ಲಿ ಸಾಗಿ ಮುಂದೆ ತಾಮ್ರಲಿಂದಪುರವನ್ನು ಸೇರುತ್ತಾನೆ.

ತಾಮ್ರಲಿಂದಪುರದಲ್ಲಿ ನಂದಿಶೆಟ್ಟಿಯೆನ್ನುವ ವ್ಯಾಪಾರಿ ಇವನಿಗೆ ಅನ್ನ ನೀರು ವಸತಿಯನ್ನು ಕೊಡುತ್ತಾನೆ. ಅವನ ಬಗ್ಗೆ ವಿಚಾರಿಸಿದಾಗ ರಾಜನು ತಾನು ವಿಭಾಕರ ಎಂದು ಹೇಳಿ, ತನ್ನ ಗ್ರಹಗತಿಯಿಂದ ಇಂದ ತನಗೆ ಹೀಗೆ ಸ್ಥಿತಿ ಉಂಟಾಗಿದೆ ಎನ್ನುತ್ತಾನೆ. ಒಂದು ದಿನ ಶೆಟ್ಟಿಯ ಮಗಳಾದ ಆಲೋಲಿಕೆ ಮುತ್ತಿನ ಮಾಲೆಯನ್ನು ತೆಗೆದು ಚಿತ್ತಾರದ ಹಂಸಕ್ಕೆ ತೂಗಿ ಹಾಕಿ ನಿದ್ರಿಸುತ್ತಾಳೆ. ಆ ಸಮಯಲ್ಲಿ ಶನಿಯ ಪ್ರಭಾವದಿಂದ ಚಿತ್ತಾರದ ಹಂಸವು ಮುತ್ತಿನ ಹಾರವನ್ನು ನುಂಗುವುದನ್ನು ವಿಭಾಕರನು ನೋಡುತ್ತಾನೆ. ಆಲೋಲಿಕೆ ಎದ್ದು ನೋಡಿದರೆ ಮುತ್ತಿನ ಹಾರವಿಲ್ಲ. ಎಚ್ಚರಗೊಂಡ ಅಲೋಲಿಕೆ ಹಾರವು ಕಾಣದ ಕಾರಣವನ್ನು ವಿಭಾಕರನಲ್ಲಿ ಕೇಳಿದಾಗ ನಡೆದ ವಿಷಯವನ್ನು ತಿಳಿಸಿದರೂ ಆಕೆಯ ಅದನ್ನು ನಂಬುವುದಿಲ್ಲ.

ನಂದಿಶೆಟ್ಟಿ ರಾಜನಾದ ಚಂದ್ರಸೇನನ ಬಳಿ ಬಂದು, ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ಬೇಡಿಕೊಳ್ಳುತ್ತಾನೆ. ಚಂದ್ರಸೇನನು ಆರೋಪಿ ವಿಭಾಕರನ ಕೈ ಕಾಲುಗಳನ್ನು ಕತ್ತರಿಸುವಂತೆ ಆಜ್ಞೆ ಮಾಡುತ್ತಾನೆ.

ರಾಜನ ಆಣತಿಯಂತೆ ಅವನ ಕೈಕಾಲು ಕತ್ತರಿಸುತ್ತಾರೆ. ನಿರಶನದಿಂದ ಸಾಯುವ ಸ್ಥಿತಿ ಒದಗುತ್ತದೆ. ಏತಕೆ ಶನಿಯನ್ನು ಜರೆದೆನೊ ಎಂಬ ಭಾವ ಉಂಟಾಗುತ್ತದೆ. ಒಂದು ದಿನ ದೀಪಕರಾಗವನ್ನು ವಿಭಾಕರನು ಹಾಡಿದಾಗ, ಅವನ ಹಾಡಿನಿಂದ ಅರಮನೆ ದೀಪಗಳೆಲ್ಲ ಉರಿಯುತ್ತದೆ. ಇದನ್ನು ಕಂಡು ಚಕಿತಳಾದ ಚಂದ್ರಸೇನನ ಮಗಳಾದ ಪದ್ಮಾವತಿ ಯಾರು ಹಾಡಿದವರೆಂದು ಹುಡುಕುವಂತೆ ಸೇವಕರಿಗೆ ಆಣತಿಯನ್ನು ಕೊಡುತ್ತಾಳೆ. ಅವರು ಕೈಕಾಲು ಇಲ್ಲದ ವಿಭಾಕರನ್ನು ಕರೆತರುತ್ತಾರೆ. ಇವನನ್ನು ಕಂಡ ಚಂದ್ರಸೇನ ಕುಪಿತನಾಗಿ, ನಾಳೆ ಇವನ ತಲೆಯನ್ನು ಕಡಿಯುವಂತೆ ಕಟುಕರಿಗೆ ಹೇಳುತ್ತಾನೆ. ಮುಂದೆ ತನ್ನ ಸಾವು ಖಚಿತವೆಂದು ತಿಳಿದ ವಿಕ್ರಮ, ಶನಿಯನ್ನು ಪ್ರಾರ್ಥನೆ ಮಾಡುತ್ತಾನೆ. ಪ್ರತ್ಯಕ್ಷನಾದ ಶನಿಯೂ ಅವನ ಭಕ್ತಿಗೆ ಮೆಚ್ಚಿ ಕೈ ಕಾಲುಗಳು ಮತ್ತೆ ಬರುವಂತೆ ಮತ್ತು ಅಪವಾದಗಳು ದೂರವಾಗುವಂತೆ ಮಾಡುತ್ತಾನೆ.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಶ್ರೀ ಗಣಪಯ್ಯ ಶೆಟ್ಟಿಯವರು ದಿನಾಂಕ ೪ನೇ ಜೂನ್ ೧೯೦೯ರಲ್ಲಿ ಹೆಬ್ರಿ ಸಮೀಪದ ಸೀತಾನದಿ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀ ಕೊರಗಪ್ಪ ಶೆಟ್ಟರು ಮತ್ತು ತಾಯಿ ಶ್ರೀಮತಿ ನಾಗಮ್ಮ. ಅವರು ಪ್ರಾಥಮಿಕ ಶಿಕ್ಷಣವನ್ನು ಹೆಬ್ರಿಯಲ್ಲಿ ಪಡೆದರು. ಉನ್ನತ ಶಿಕ್ಷಣದ ಸಹಾಯಕ್ಕಾಗಿ ಶ್ರೀ ಐರೋಡಿ ನರಸಿಂಹ ಹೆಬ್ಬಾರರ ಸಂಪರ್ಕಕ್ಕೆ ಬಂದ ಗಣಪಯ್ಯ ಶೆಟ್ಟರಿಗೆ ಭಾಗವತ, ಜೈಮಿನಿ ಭಾರತ, ಕುಮಾರವ್ಯಾಸ ಭಾರತ ಮೊದಲಾದ ಪುರಾಣ ಗ್ರಂಥಗಳ ಆಳ – ವಿಸ್ತಾರದ ಅರಿವಾಯಿತು. ಉನ್ನತ ಶಿಕ್ಷಣದ ನಂತರ ವೃತ್ತಿಯಲ್ಲಿ ಅಧ್ಯಾಪಕರಾದ ಗಣಪಯ್ಯ ಶೆಟ್ಟರು ಕಾರ್ಕಳ ಮತ್ತು ಹಿರಿಯಡ್ಕದ ಶಾಲೆಗಳಲ್ಲಿ ಸೇವೆ ಸಲ್ಲಿಸಿದರು. ೧೯೩೪ರಲ್ಲಿ ಯಕ್ಷಗಾನ ತಾಳಮದ್ದಲೆ ಅರ್ಥದಾರಿಯಾಗಿ ಕಲಾಸೇವೆ ಪ್ರಾರಂಭ. ಮುಖ್ಯವಾಗಿ ಪಾತ್ರಪೋಷಣೆಯ ಜೊತೆಗೆ ಸ್ತ್ರೀಪಾತ್ರಗಳಿಗೆ ವಿಶೇಷ ಗೌರವ ಮತ್ತು ಮನ್ನಣೆಯನ್ನು ದೊರಕಿಸಿಕೊಟ್ಟವರು ಗಣಪಯ್ಯ ಶೆಟ್ಟರು. ೧೯೩೮ರಲ್ಲಿ ತಾಳಮದ್ದಲೆಯ ಪ್ರಾಕಾರಕ್ಕಾಗಿಯೇ ಸ್ಥಾಪಿತಗೊಂಡ 'ಯಕ್ಷಕಲಾ ಮಂಡಳಿ, ಉಡುಪಿ'ಯು ಅವರ ಕಲಾಪ್ರತಿಭೆಯ ಅನಾವರಣಕ್ಕೊಂದು ಪ್ರಮುಖ ವೇದಿಕೆಯಾಯಿತು.

೧೨ ಅರ್ಥ ಸಹಿತ ಪ್ರಸಂಗಗಳ ಜೊತೆಗೆ ಹಲವಾರು ಸಾಮಾಜಿಕ ಮತ್ತು ಪೌರಾಣಿಕ ಪ್ರಸಂಗಗಳ ರಚನಾಕಾರರು ಶ್ರೀ ಸೀತಾನದಿ ಗಣಪಯ್ಯ ಶೆಟ್ಟರು. ಹೆಬ್ರಿ ತಾಲೂಕಿನ ಕನ್ನಡ ಸಾಹಿತ್ಯ ಸಮ್ಮೇಳನದ ವೇದಿಕೆಯ ಮೂಲಕ ಇವರಿಗೆ ಸಾಹಿತ್ಯಾಸಕ್ತರು ಮತ್ತು ಕಲಾಪ್ರೇಮಿಗಳಿಂದ ಗೌರವ ಸಮರ್ಪಣೆಯಾಗಿದೆ.

ಇವರು ಬರೆದ ಪ್ರಸಂಗಗಳು: ಅಪ್ಸರೆಯ ಅವಾಂತರ, ಕರ್ಣಪಟ್ಟಾಭಿಷೇಕ, ಕುಂತೀ ಸ್ವಯಂವರ, ಗಣೇಶ ಮಹಾತ್ಮೆ, ಗಂಡುಗಲಿ ಭೀಮಸೇನ, ಚಿತ್ರಾಂಗದಾ, ಚ್ಯವನೋಪಾಖ್ಯಾನ, ಜಗಜ್ಜಟ್ಟಿ ಜರಾಸಂಧ, ಧನುರ್ಧರ ಧನಂಜಯ, ಮಾಲತೀ ಪರಿಣಯ, ರುದ್ರಾಕ್ಷಿ ಮಹಿಮೆ, ವಾಲಿ ವಿಜಯ, ವಿಶ್ವಾಮಿತ್ರ ಮೇನಕಾ, ವೀರ ವಜ್ರಾಂಗ, ಶಕುಂತಲಾ ಪರಿಣಯ, ಶನೀಶ್ವರ ಮಹಾತ್ಮೆ, ಸತೀ ಸೌದಾಮಿನಿ, ಸಹದೇವ ದಿಗ್ವಿಜಯ, ಹರಿಣಾಕ್ಷಿ ಪರಿಣಯ, ಕಾಂತಬಾರೆ ಬುದಾಬಾರೆ, ಕೋಡ್ದಬ್ಬು – ತನ್ನಿಮಾನಿಗ, ಗುರುಗುಂಜಿ ಬನ್ನಾಳು, ತುಳುನಾಡ ಸಿರಿದೇವಿ, ಪಂಜುರ್ಲಿ ಪ್ರತಾಪ, ಬೀರು ಕಲ್ಕುಡ, ಬೈಕಾಡ್ತಿ ಪ್ರತಾಪ, ಭೂತಾಳಪಾಂಡ್ಯ, ಕುಕ್ಕುಟಾಸುರ ಸಂಹಾರ, ಧರ್ಮಸ್ಥಳ ಕ್ಷೇತ್ರಮಹಾತ್ಮೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ, ಮಂದರ್ತಿ ಕ್ಷೇತ್ರ ಮಹಾತ್ಮೆ, ಮುಂಡ್ಕೂರು ಕ್ಷೇತ್ರ ಮಹಾತ್ಮೆ, ಹಿರಿಯಡಕ ಕ್ಷೇತ್ರ ಮಹಾತ್ಮೆ, ಚಂದ್ರಗುಪ್ತ ವಿಜಯ, ನಸ್ರೀರ ವಿಜಯ, ಸಂಯೋಗಿತಾ ಪರಿಣಯ, ಸತ್ಯಾಶ್ರಯ ಪುಲಿಕೇಶಿ, ಚಂದ್ರಪ್ರಭಾ ಪರಿಣಯ, ಜಯಚಂದ್ರ ಪರಾಜಯ, ಮಲಯಾಂಬಿಕಾ, ಮಾಣಿಕ್ಯಪುರ ಮಹಿಮೆ, ರಾಣಿ ರತ್ನಾವಳಿ, ರಾಣಿ ಮಣಿಮಾಲಿನಿ, ರಾಷ್ಟ್ರ ವಿಜಯ, ವೀರಚಂದ್ರಧ್ವಜ, ವೀರ ಪುಷ್ಪಧ್ವಜ, ಶೂರ ಶತಧನ್ವ, ಶೂರ ಶುಭಸೇನ, ಶೈಲಿನಿ ಶಪಥ, ಸತೀ ಮಹಾಶ್ವೇತೆ, ಸಾಧ್ವಿ ಸದಾರಮಾ, ಸೋಮಪ್ರಭಾ ಪರಿಣಯ, ಜಾಲಕೊರತಿ, ಬಂಗಾರ್ದ ಚಿಂಗಾರಿ, ಮಾಯಾ ಜುಮಾದಿ, ಸೊನ್ನೆ ಸ್ಯೆರಗೆ

**ಟಿಪ್ಪಣಿ:**

ಯಕ್ಷಗಾನದಲ್ಲಿ ಬಳಕೆಯಲ್ಲಿರುವ ಪ್ರಸಂಗ.

# ಪ್ರಸಂಗ ಸಾಹಿತ್ಯ

**ಭಾಮಿನಿ**
ಶ್ರೀ ರಮಾವರ ದೈತ್ಯಕುಲಹರ |
ನೀರಜಾಕ್ಷ ನಿರಾಮಯಾಮರ |
ವಾರವಂದಿತ ಪದುಮನಾಭ ಸುಖಂಕರಾದಿ ಗುರು ||
ಹಾರ ಕೇಯೂರಾದಿ ಭೂಷಿತ |
ಪಾರ ಕರುಣಾವನಧಿ ಕಾವುದು |
ತೋರಿ ದಯ ಕೃತಿಮತಿಗೆ ಮಂಗಲವಿತ್ತು ಅನವರತ || 1 ||

**ಕಂದ**
ಗಣಪತಿಯಗಜಾತ್ಮಜ ಶುಭ |
ಗುಣನಿಧಿ ವರದಾಯಕವರ ವಿಘ್ನವಿನಾಶಂ ||
ಮಣಿಯುತೆ ನುತಿಪೆಂ ನಿನ್ನಂ |
ಪ್ರಣವ ಸುರೂಪನೆ ಕರುಣಿಸು ಮಂಗಲ ಕೃತಿಗಂ || 2 ||

**ಭಾಮಿನಿ**
ಅಂಬೆ ತ್ರೈಜಗದಂಬೆ ಕಮಲಜ |
ರಂಭೆ ಸುರನರ ಪೂಜ್ಯೆ ಗುಣಮಣಿ |
ಬಿಂಬೆ ವರ ಮೂಕಾಂಬೆ ಶೃಂಗಾಪುರದ ದಿವ್ಯಾಂಬೆ ||
ನಂಬಿಹೆಂ ವಿದ್ಯಾಧಿದೇವಿಯೆ |
ಕುಂಭಿನಿಯ ಭಕ್ತಾಭಿಮಾನಿಯೆ |
ತುಂಬಿ ದಯ ನಲಿದುಲಿಯುತೆನ್ನೀ ಕೃತಿಯ ಮೆರೆಸೆಂಬೆ || 3 ||

**ಸೌರಾಷ್ಟ್ರ - ತ್ರಿವುಡೆ**
ಒಂದು ದಿನ ವೈಕುಂಠದಲಿ ಹರಿ |
ಚಂದದಿಂದಿರೆಯೊಡನೆ ಓಲಗ |
ದಿಂದ ಮೆರೆಯುತಲೀರ್ದನತ್ಯಾ | ನಂದದಿಂದ || 4 ||

ಪರಮ ಮುನಿ ಸನಕಾದಿಗಳು ನೆರೆ |
ದಿರಲು ತುಂಬುರ ಗಾನವಾಡು |
ತ್ತಿರಲು ನಿತ್ಯಾನಂದನೆಸೆದಿರೆ | ಬರಲು ವಿಧಿಜ || 5 ||

ಬಂದ ನಾರದನನ್ನು ಕಾಣುತ |
ಮಂದರಾಧರ ತೋಷದಿಂ ಕರೆ |
ದೆಂದನೇನಿದು ಕಂದ ಮೊಗವತಿ | ಕುಂದಿರುವುದು || 6 ||

**ನವರೋಜು – ಏಕ**
ಲಾಲಿಸು ದೇವರ ದೇವ | ಗುಣ |
ಶೀಲರ ಪ್ರೇಮದಿ ಕಾವ ||
ಭೂಲೋಕದ ಜನಜಾಲವೈಹಿಕ ಸುಖ |
ಲಾಲಸೆಯಿಂ ಪರವನು ಮರೆತಿಹರೈ || 7 ||

ಧನ ಜನ ಸಂಗ್ರಹಿಸುವರು | ಸುಖ |
ವನುಭವಿಸೆ ಮದಮುಖರು ||
ಜನ ಹಿತ ಧರ್ಮವ ಗಣಿಸದೆ ಮೆರೆವರು |
ಎಣಿಸಲು ಭಯವಹುದಿಳೆಯಲಿ ಜೀವನ || 8 ||

**ಕೇದಾರಗೌಳ - ಅಷ್ಟ**
ಏನನೆಂಬೆನು ಮೌನಿ ಜ್ಞಾನ ಗಳಿಸೆ ವೇದ |
ನಾನೊದಗಿಸೆ ನರನು ||
ಹೀನತನದೊಳಿಂದು ಹಾನಿ ದುರ್ಮಾರ್ಗದಿ |
ತಾ ನಡೆದಿರುವನಯ್ಯ || 9 ||

ಉರುಪವೇಗದಿ ಚಲಿಸಿರುವ ಭಂಡಿಗೆ ಒಂದು |
ಬಿರಿಯ ನಾ ತೊಡಿಸದಿರೆ ||
ಸರುವ ಸೃಷ್ಟಿಯು ಹಾಳು ಸರಿದು ಪೋಪುದು ಸತ್ಯ |
ಮುರಿವೆನಾಹಂಕೃತಿಯ || 10 ||

ಮನದಿ ಸಂಕಲ್ಪಿಸೆ ಇನನಿಂದ ಛಾಯೆಯೊಳ್ |
ಜನಿಸಿದ ಸುಕುಮಾರನು ||
ಶನಿಯೆಂಬ ನಾಮದಿ ದಿನದಿನ ಬೆಳೆದನು |
ಘನಗ್ರಹಪತಿಯಾದನು || 11 ||

ದೃಷ್ಟಿ ಸೋಕಲು ಪಾದ ನಷ್ಟ ಅರುಣನಿಗೆ |
ಕುಷ್ಟ ವ್ಯಾಧಿಯು ಸೂರ್ಯಗೆ ||
ಸೃಷ್ಟಿಸುವಜನಿಗೆ ಕುಟ್ಟಿ ಹೋಯಿತು ಶಿರ |
ಕಷ್ಟಪಟ್ಟರು ಸರ್ವರು || 12 ||

ಸಿರಿಯರಸನ ಬಳಿ ಸರಿಯಲಾರೆನು ಈಗ |
ಹರನ ಕಾಣುವೆನೆನ್ನುತ ||
ಪರಮ ಉಲ್ಲಾಸದಿ ತರಣಿಜ ನಡೆದನು |
ಪರತರ ರಜತಾದ್ರಿಗೆ || 13 ||

**ಕಾಂಭೋದಿ - ಝಂಪೆ**
ಪರಮ ಕೈಲಾಸದಲಿ ಪರಮೇಶ್ವರನು ತಾನು |
ಗಿರಿಜಾತೆಯೊಡಗೂಡಿ ಮೆರೆಯೆ ||
ವರ ಗಣಪ ಗುಹನಂದಿ ನೆರೆದು ನಾಟ್ಯವನಾಡೆ |
ತರಣಿಜನು ಬರೆ ಕಂಡು ಹರನು || 14 ||

ಭಾನುನಂದನನನ್ನು ಸಾನುರಾಗದಿ ಕರೆದು |
ತಾ ನಗುತಲಿಂತೆಂದ ಶಿವನು ||
ಏನು ಕಾರಣ ಬಂದೆ ಊನಾಂಗನಾಗಿರುತ |
ನೀನಿಂದು ರಜತಾದ್ರಿ ಗಿರಿಗೆ || 15 ||

ಪರಮ ಶಿವ ಲಾಲಿಪುದು ರಾಶಿ ಚಕ್ರದಿ ನಾನು |
ಚರಿಸುತಿರೆ ದ್ವಾದಶವು ನಿಮಗೆ ||
ಸರಿದು ಬಂದೆನು ದೇವ ವರವನೀವುದು ಎನಲು |
ಹರನೆಂದ ಎನಗು ತಾಗುವೆಯ || 16 ||

ಹರಿಯ ನೇಮವಿದೆನಗೆ ತೊರೆಯಲಪ್ಪುದೆ ದೇವ |
ಕರುಣಿಪುದು ಮೂವತ್ತು ಗಳಿಗೆ ||
ಪರಿಯಂತ ನೆಲಸಿ ನಾ ತೆರಳುವೆನು ಎನೆ ಕೇಳಿ |
ಹರನೆಂದ ನಾಳೆ ಬಾ ಎನುತ || 17 ||

**ಭಾಮಿನಿ**
ತೆರಳಲಾ ಶನಿಯಿತ್ತ ಮನದೊಳು |
ಹರನು ಯೋಚಿಸಿ ಅಡಗಿ ಕುಳಿತಿರೆ |
ತರಣಿಜನು ಹುಡುಹುಡುಕಿ ತೊಲಗುವನೆನುತ ನಿಶ್ಚೈಸಿ ||
ಗಿರಿಯ ಗಂಹರದೆಡೆಯ ಬಿದಿರೊಳು |
ಇರುವೆಯಾಗುತಲಡಗಿ ಕುಳಿತನು |
ಮರುದಿನದಿ ಶನಿ ಬರಲು ಕಾಣಿಸಿಕೊಂಡು ಗಹಗಹಿಸಿ || 18 ||

**ಸುರುಟಿ - ಏಕ**
ಏನಿದು ಶನಿರಾಯ | ನಿನ್ನನು |
ಕಾಣೆನು ಮಹನೀಯ ||
ಮಾಣದೆ ಬಹೆಯೆಂ | ದಾನಿರೆ ಕಳೆದುದು |
ನೀನುಸುರಿದ ಮಾ | ತೇನಿದು ಪುಸಿಯಿತು || 19 ||

ಪಶುಪತಿ ಯಾಲಿಪುದು |
ಮಮನುಡಿ ಪುಸಿಯದು ಯೋಚಿಪುದು ||
ವಿಶ್ವೇಶ್ವರ ಎನ್ನೊಂಚಿಸಲಾಗದು |
ವಿಶ್ವವೆ ನಡುಗುವುದೆನ್ನಯ ಮುನಿಸಿಗೆ || 20 ||

ಈ ರಜತಾದ್ರಿಯನು | ತ್ಯಜಿಸುತ |
ಸಾರಿದೆಯಲ ನೀನು ||
ಕಾರಡವಿಯ ಬಿದಿರೋಟೆಯಲಡಗಿದೆ |
ಕಾರಣ ತಿಳಿದೆಯ ಎನ್ನದೆ ಕಾಟವು || 21 ||

ಭಳಿಭಳಿರೆಲವೊ ಶನಿ | ವಂಚಿಸು |
ತುಳಿಯದು ನಿನ್ನವನಿ ||
ಯೊಳು ನೆಲಸಿಹರಂ ಬಳಲಿಸಿ ಧರ್ಮದಿ |
ನೆಲೆಗೊಳಿಸೈ ಗ್ರಹ | ದಲಿ ಬಲಯುತ ನಿಜ || 22 ||

**ಭಾಮಿನಿ (ಅರ್ಧ)**
ಇಂತು ಪರಮೇಶ್ವರನು ಪೊಗಳಲಿ |
ಕಂತರಂಗದಿ ತೋಷ ತಾಳುತ |
ಮುಂತೆ ತೆರಳಿದ ಗೀಷ್ಪತಿಯ ಬಳಿಗಾಗ ತರಣಿಜನು || 23 ||

**ಸೌರಾಷ್ಟ್ರ - ತ್ರಿವುಡೆ**
ಇತ್ತ ಕೇಳೈ ತೇಜವತಿ ಪುರ |
ಪೃಥ್ವಿಪಾಲಕ ಭೃಗು ವಿಲಾಸದಿ |
ನಿತ್ಯ ಸಂತಸದಿಂದಲಾಳ್ತಿರೆ ಪುತ್ರರುದಿಸೆ || 24 ||

ಸತ್ಯಶೇಖರ ಹಿರಿಯ ಪುತ್ರನು |
ಸತ್ಯಸುವ್ರತನೆರಡನೆಯ ಸುತ |
ನಿತ್ಯಸಂತೋಷದಲಿ ಬೆಳೆದರು | ಪುತ್ರರಾಗ || 25 ||

ಕಲಿತು ವಿದ್ಯಾಬುದ್ಧಿ ಮೆರೆದರು |
ಗೆಲವಿನಿಂ ಬಂದೊಂದಿಸಲು ನೃಪ |
ತಿಲಕನಾಲಿಂಗಿಸುತ ಮುದ್ದಿಸು | ತೊಲಿದು ನುಡಿದ || 26 ||

**ಕೇದಾರಗೌಳ - ಅಷ್ಟ**
ಬಂದುದೇನೆಲೆ ಮುದ್ದು ಕಂದರೆ ನೀವೀಗ |
ಲೊಂದಿಸಿರುವ ಪರಿಯು ||
ಸಂದೇಹಕಾಸ್ಪದ ಮುಂದೇನು ಯೋಚನೆ |
ಯೆಂದು ತಾ ಬೆಸಗೊಂಡನು || 27 ||

ಜನಕ ಲಾಲಿಸು ನಾವು ಧನುರ್ವಿದ್ಯೆ ಕಲಿತೆವು |
ಘನತರಭ್ಯಾಸದಲಿ ||
ವನದಲಿ ನೆಲಸಿಹ ಘನ ಮೃಗ ಬೇಟೆಗೆ |
ಅನುಮತಿಯೀಯುವುದು || 28 ||

ಬೇಡವೈ ಮೃಗಬೇಟೆ ರೂಢಿಯೊಳತಿ ಕಷ್ಟ |
ಆಡುವ ಬಾಲರಯ್ಯ ||
ಕಾಡು ಹಿಂಸ್ರಕ ಪಶುನಾಡು ರಕ್ಕಸಬೀಡು |
ಕೇಡಹುದಯ್ಯ ಮುಂದೆ || 29 ||

ಕೇಡುಗಳಿಗೆ ಅಂಜಿ ಓಡಿದಡಾವೆಂತು |
ನಾಡನಾಳುವೆವು ಮುಂದೆ ||
ಬೇಡವೆನ್ನದೆ ದಯಮಾಡಿ ವೀಳಯ ಕೊಡಿ |
ಆಡಿ ಬೇಟೆಯ ಬಹೆವು || 30 ||

ಮಕ್ಕಳಿಲ್ಲದ ನಾವು ದುಃಖ ಪಡುತಲಿದ್ದು |
ಮಿಕ್ಕಿದ ವ್ರತಯಾತ್ರೆಯ ||
ಲೆಕ್ಕವಿಲ್ಲದ ದಾನವಿಕ್ಕಿ ಪಡೆದು ವನ |
ಕಿಕ್ಕಲೇನಯ್ಯ ನಿಮ್ಮ || 31 ||

ಮುದ್ದು ಮಾಡಲು ಮಗು ಹೊದ್ದದು ಕೀರ್ತಿಯ |
ತಿದ್ದುವಡೀ ರೀತಿಯೇ ||
ಹೊದ್ದೆ ಕಷ್ಟವು ಮತಿ ವೃದ್ಧಿ ಹೊಂದುವುದಯ್ಯ |
ಸಿದ್ಧಿಸಪ್ಪಣೆಯೆಮಗೆ || 32 ||

**ಭಾಮಿನಿ (ಅರ್ಧ)**
ಬಾಲಕರ ಬೇಡಿಕೆಯನೊಪ್ಪುತ |
ಭೂಲಲಾಮನು ಕಳುಹಲಾಕ್ಷಣ |
ತಾಳಿ ಹರುಷವ ನಡೆದರತ್ಯುತ್ಸಾಹದಲಿ ವನದಿ || 33 ||

**ಭೈರವಿ – ತ್ರಿವುಡೆ**
ನಡೆದರಾಗ | ವನದೊಳು | ನಡೆದರಾಗ || ಪಲ್ಲವಿ ||
ನಡೆದರಾ ಬಾಲಕರು ಶಬರರ ಪಡೆಗಳನ್ನೊಡಗೂಡುತಾ |
ಬಡಿದು ಪೊದೆಗಳ ಬೊಬ್ಬೆಯೆಬ್ಬಿಸಿ ಅಡಗಿಕೊಂಡಿಹ ಮೃಗಗಳ ||
ನಿಡುತರದ ಸರಳುಗಳನೆಸೆಯುತ ಮಡುಹಿ ತೋಷದಿ ಹಿಗ್ಗುತ |
ಅಡವಿಯಲಿ ಮೃಗಬೇಟೆಯೆಸಗುತ ಮುಂದೆ ಮುಂದಕೆ ನುಗ್ಗುತ || ನಡೆದ || 34 ||

**ಭಾಮಿನಿ (ಅರ್ಧ)**
ಇತ್ತಲಾ ಗೀಷ್ಪತಿಯು ಸ್ನಾನ |
ಕ್ಕೆನುತ ಗಂಗೆಯ ಸಾರಿ ಬರುತಿರೆ |
ಮಿತ್ರಜಾತನು ಬಂದು ನಮಿಸಿದ ನಗುತಲಾಕ್ಷಣದಿ || 35 ||

**ಕಾಪಿ – ಅಷ್ಟ**
ಏನಿದಂಬುಜಮಿತ್ರಜಾತ | ನಗೆ |
ಯಾನನ ತುಂಬಿಹುದೇನು ವಿಖ್ಯಾತ ||
ಬಾಣಾಕ್ಷ ಪೊರಟಿಹುದಾವಲ್ಲಿಗಿಂದು |
ನೀನೊರೆಯೆನೆ ಶನಿ ಪೇಳಿದನಂದು || 36 ||

ಆಲಿಸಬೇಕೆನ್ನ ನುಡಿಯ | ಎ |
ನ್ನಾಲೋಚನೆಯ ತಿಳಿಯೆಯ ಪೇಳು ಜೀಯ ||
ಕಾಲ ಬಂದಿದೆ ದ್ವಾದಶಾಲಯ ಸೇರೆ |
ಪಾಲಿಪುದಪ್ಪಣೆ ಹೇ ಗುಣಾಕರನೇ || 37 ||

ಅರರೆ ಏನಿದು ಬಂತು ಪೀಡೆ | ಆಹ |
ಗುರುವಾದ ಎನ್ನ ಕಾಡಲು ಮನ ಮಾಡೆ ||
ದುರಿತವಲ್ಲದೆ ಶಿಷ್ಯ ತೆರಳಯ್ಯ ನೀನು |
ಪರಮ ಸತ್ಯಾತ್ಮನು ಸುರಗುರು ನಾನು || 38 ||

ಯಾರಾದರೇನಯ್ಯ ನಾನು | ದಯ |
ತೋರೆನು ಹರಿಯೊರೆದಿಹ ನಿಯಮವನು ||
ಮೀರುವದೆಂತಯ್ಯ ಪೇಳೆನ್ನ ಗತಿಯ |
ಮೂರ್ಹತ್ತು ಮಾಸವೆ ಕಾಡುವೆನಯ್ಯ || 39 ||

ಅತ್ತು ಬೇಡಲು ಕೇಳನಿವನು | ನಾ |
ನೆತ್ತ ಹೋದರು ಶನಿಯಿವ ಬೆನ್ನ ಬಿಡನು ||
ಮಿತ್ರ ಸಂಜಾತ ನೀ ಕೇಳೆನ್ನ ನುಡಿಯ |
ಮತ್ತೆ ನಾಲ್ಕೇ ಜಾವ ಸಾಕು ಸಾಕಯ್ಯ || 40 ||

**ಭಾಮಿನಿ**
ಅನುಮತಿಯನಿತ್ತೊಡನೆ ಗುರು ಸುರ |
ವನಧಿಯಲಿ ಸ್ನಾನಾದಿ ಕರ್ಮಗ |
ಳನು ಮುಗಿಸಿ ಬರುತಿರಲು ಕೃಷಿಕನ ವೇಷ ತಾಳುತಲಿ ||
ಶನಿಯು ಬಂದಾ ಗುರುವಿಗೆರಗುತ |
ವಿನಯದಿಂ ಪರಿಪರಿಯ ನುತಿಸುತ |
ಮುನಿಪತಿಗೆ ಕರಬೂಜವೆರಡನ್ನಿತ್ತು ತೆರಳಿದನು || 41 ||

**ಸಾಂಗತ್ಯ - ರೂಪಕ**
ಇತ್ತ ಬೇಟೆಗೆ ಪೋದ ಪುತ್ರರ ಕಾಣದೆ |
ಪೃಥ್ವಿಪಾಲಕ ಮರುಗುತಲಿ ||
ಎತ್ತ ಪೋದರೊ ಕಾಣೆ ಚಿತ್ತ ಚಂಚಲಿಪುದು |
ಕತ್ತಲಾದುದು ಬಾರದಿಹರು || 42 ||

ಕಾಡ ದಾರಿಯ ತಪ್ಪಿ ಗೂಢಪಾದವು ನುಂಗಿ |
ಮೂಢ ದೈತ್ಯರು ಕೊಂದರೇನೊ ||
ಬೇಡವೆಂದರೆ ಬೇಟೆಯಾಡಲೆನ್ನುತ ಪೋಗೆ |
ಕೇಡೊದಗಿದುದೇನ ಮಾಳ್ಪೆ || 43 ||

**ಭಾಮಿನಿ**
ಕರೆದು ದೂತರ ತಿಳುಹಿ ಕಳುಹಿದ |
ನರಸುವಡೆ ಬಾಲಕರ ತ್ವರಿತದಿ |
ಕರೆಕರೆದು ಹುಡುಕುತ್ತೆ ನಡೆದರು ಚರರು ದಿಗ್ದೆಸೆಗೆ ||
ಸುರನದಿಯ ಬಳಿಯಿಂದಲೈದಿಹ |
ಗುರುವಿನಾ ಚೀಲದಲಿ ಕೆಂಪಗೆ |
ಸುರಿವ ದ್ರವವನು ಕಂಡು ಬೆರಗಾಗುತ್ತಲಿಂತೆಂದ || 44 ||

**ಸೌರಾಷ್ಟ್ರ - ತ್ರಿವುಡೆ**
ಏನಿದೇನೈ ವಿಪ್ರ ಚೀಲದೊ |
ಳೇನು ನೆತ್ತರು ಸೂಸುತಿದೆ ಅನು |
ಮಾನ ತೋರ್ಪುದು ನಿಲ್ಲು ನಿನ್ನಭಿ | ಧಾನವೇನು || 45 ||

ಸುರಗುರುವು ನಾನೀಗ ಕೃಷಿಕನು |
ಬರುತ ಕರಬೂಜಂಗಳಿತ್ತನು |
ಇರಿಸಿ ಚೀಲದಿ ತಂದೆ ಬೇರೇ | ನಿರದು ನೋಡಿ || 46 ||

ಕಸಿದು ಚೀಲವ ತೆರೆದು ನೋಡಿದ |
ಡೆಸೆವ ತರಳರ ತಲೆಯ ಕಾಣುತ |
ಹಸಿದ ಹುಲಿಯಂತಾರ್ಭಟಿಸುತಲಿ | ಮಸಗಿ ಚರನು || 47 ||

**ಘಂಟಾರವ - ಅಷ್ಟ**
ಅರರೆ ಏನಿದು ದುರುಳ ಖಳಾಧಮ |
ತರಿದು ತರಳರ ತಲೆಯ ತಂದೆಯ |
ಧರೆಯೊಳುಳಿವೆಯ ಮರುಳನೆ || 48 ||

ಕೊಲೆಯ ಕಾರ್ಯವನೆಸಗುವೆನೆನ್ನುತ |
ತಳದು ಮುನಿ ವೇಷವನು ನಟಿಸಲು |
ತಲೆಯನುಳಿಸುವರಾರೆಲ || 49 ||

ಪರಮ ಕೋಪದಿ ಹೆಡೆಮುರಿ ಬಿಗಿಯುತ |
ದರದರನೆ ಎಳತಂದು ಭೂಪಗೆ |
ಎರಗಿ ತೋರಿದರಿವನನು || 50 ||

**ಸಾರಂಗ – ಅಷ್ಟ**
ಲಾಲಿಸಬೇಕು ರಾಯ | ಬೇಟೆಗೆ ಪೋದ |
ಬಾಲರ ಪುಡುಕಿದೆವಯ್ಯ ||
ಖೂಳ ಮುನಿಪನಿವ | ಹಾಳು ಬುದ್ಧಿಯ ತೋರಿ |
ಬಾಲರ ಕೊಂದಿಹನು | ತಂದಿಹೆನು || 51 ||

ನವರತ್ನದಾಭರಣ | ಧರಿಸಿದರಿಂದ |
ಆವರಿಗಾಯಿತು ಮರಣ ||
ಕವಡು ಮುನಿಯ ಚೀಲ | ದವರಾಭರಣಗಳು |
ಇವೆ ರುಂಡ ಬಾಲರದು | ನೋಡುವುದು || 52 ||

**ಮಾರವಿ - ಏಕ**
ಖೂಳ ಖಳಾಧಮ ನೀಚನೆ ಎನ್ನಯ |
ಬಾಲರ ತಲೆಗಡಿದು ||
ಚೀಲದೊಳೊಯ್ವರೆ ಕೇಳುವರಿಲ್ಲವೆ |
ಬಾಳುವೆ ಮುಗಿಸುವೆನು || 53 ||

ಮೋಸದಿ ಮುನಿಪತಿ ವೇಷವ ಧರಿಸುತ |
ಘಾಸಿಯ ಗೈದೆಯಲ ||
ಭೂಸುರ ಕುಲಕಪಹಾಸ್ಯವ ಗಳಿಸಿದೆ |
ಹೇಸಿಕೆ ಸುಡುಜನುಮ || 54 ||

ಬಾಲರ ಕೊಂದಿಹ ಖೂಳನನುಳಿಸಲು |
ಹಾಳಹುದೀಲೋಕ ||
ಮೂಳನನೊಯ್ಯುತೆ | ಶೂಲಕ್ಕೇರಿಸಿ |
ಬಾಳುವೆ ಮುಗಿಸಿ ಬಿಡಿ || 55 ||

**ಸೌರಾಷ್ಟ್ರ - ತ್ರಿವುಡೆ**
ಅರಸನಾಜ್ಞೆಯ ಕೇಳಿ ನಸುನುಗು |
ತಿರುವ ಗುರುವನ್ನೊಯ್ದು ಕಟುಕರು |
ಪುರದ ಹೊರವಳಯಕ್ಕೆ ತಲುಪಲು | ಗುರುವು ನುಡಿದ || 56 ||

ಕೇಳಿ ಕಟುಕರೆ ಎರಡು ಗಳಿಗೆಯ |
ತಾಳುವುದು ಪ್ರಾರ್ಥನೆಯ ಗೈವೆನು |
ಮೇಳವಿಸುವುದು ನಿಮಗೆ ಮೇಲ್ಮೆಯು | ಜಾಲವಲ್ಲ || 57 ||

ಎನಲಿಕೊಪ್ಪಿದರವರು ಗೀಷ್ಪತಿ |
ಶನಿಯ ನುತಿಸಿದ ಭಲರೆ ನಿನ್ನಯ |
ಘನತರದ ಮಹಿಮೆಯನು ಪೊಗಳಲು | ತೀರದೆನಗೆ || 58 ||

ತರಣಿಜಾತನೆ ಸುಲಭ ಕೋಪನೆ |
ಭರಿತ ಮಹಿಮಾನ್ವಿತ ನಿರಂತರ |
ಶರಣರಕ್ಷಕ ಪರಮ ಮಾಯಾ | ಕರನೆ ಭಲರೆ || 59 ||

ಇನಿತು ನುತಿಸುತ್ತಿರಲಿಕತ್ತಲು |
ವನಕೆ ಗಮಿಸಿದ ತರಳರೈದುತೆ |
ಜನನಿ ಜನಕರಿಗೆರಗೆ ಕಾಣುತ | ಜನಪ ಬೆದರಿ || 60 ||

ಏನಿದದ್ಭುತ ತನಯರೈ ದಿಟ |
ರೇನು ಮೋಸವಿದಾಯ್ತು ಶಿವ ಶಿವ |
ಮೌನಿಗತಿ ಶಿಕ್ಷೆಯನು ವಿಧಿಸಿದೆ | ಹೀನತನದಿ || 61 ||

ತಳುವಿದರೆ ಭಟರೊಧಿಪರ್ ಮುನಿಪನ |
ನುಳುಹಿಕೊಂಬೆನೆನುತ್ತ ಧಾವಿಸಿ |
ಗೆಲವಿನಿಂದಲಿ ಮುನಿಪಗೆರಗುತ | ನುಡಿದ ಜನಪ || 62 ||

ತಿಳಿಯದಪರಾಧವನು ಗೈದಿಹೆ |
ಉಳುಹುವುದು ಕುಲಕೋಟಿ ಎನ್ನುತ |
ಲಳುವ ನೃಪತಿಯ ನೆಗಹಿ ನುಡಿದನು | ಒಲವಿನಿಂದ || 63 ||

**ಭಾಮಿನಿ**
ಜನಪ ಚಿಂತಿಸಬೇಡ ಗ್ರಹಗತಿ |
ಶನಿಯ ಮಹಿಮೆಯು ತೊಲಗಿತೀಗಲೆ |
ಮನೆಗೆ ತೆರಳೆಂದೆನುತ ಕಳುಹಿಸಿ ನಾಕಕೈದಿದನು ||
ಇನಕುಲಾಂಬರ ತರಣಿ ದಶರಥ |
ಜನಪ ವೈಭವದಿಂದಲಾಳ್ವಿರೆ |
ಜನತೆ ಬರಗಾಲದಲಿ ನವೆಯಲು ನೋಡಿ ನರಪತಿಯು || 64 ||

**ಸಾಂಗತ್ಯ – ರೂಪಕ**
ಹರಹರ ರಾಷ್ಟ್ರದಿ ಬರಗಾಲ ಬಂದುದೆ |
ನೆರೆ ಕಷ್ಟ ಪ್ರಜಕನುಭವಿಸೆ ||
ನರಪತಿಯಾಗಿದ್ದು ಪರಿಹರಿಸದೆ ಪೋಗೆ |
ಧರೆಯೊಳಗಪವಾದ ಬಹುದು || 65 ||

ಸತ್ಯ ಧರ್ಮವ ಮೀರ ದುತ್ತಮಾಡಳಿತೆಯೊ |
ಳರ್ತಿಯಿಂ ಯಾಗಾದಿ ನಡೆಸಿ ||
ಇತ್ತು ದಾನವ ಭೂಪನುತ್ತಮನೆನಿಸಿರೆ |
ಮತ್ತೇನಾಯಿತೊ ಹೀಗೆ ಶಿವನೆ || 66 ||

**ಕಂದ**
ಗುರುವಂ ಸಾರುತೆ ಕೇಳ್ದಪೆ |
ಪರಿಹರವೆಂದೆನುತಲಿ ನೃಪನಾಗಲೆ ನಡೆತಂದುಂ ||
ಉರುತರ ಭಕ್ತಿಯೊಳ್ ಗುರುವಿಂ |
ಗೆರಗಲ್ ಪರಸುತೆ ಬರವಿನ ಕಾರಣ ಕೇಳ್ದಂ || 67 ||

**ಕೇದಾರಗೌಳ - ಅಷ್ಟ**
ಗುರುವರ ಲಾಲಿಸು ಬರಗಾಲ ರಾಷ್ಟ್ರದಿ |
ನೆರೆಕಷ್ಟ ಜನಗಳಿಗೆ ||
ಬರಲೇನು ಕಾರಣ ಅರಸನೆನ್ನಯ ದೋಷ |
ವಿರುವುದೆ ಪೇಳೀಗಲು || 68 ||

ಪರಮ ಶಿಷ್ಯನೆ ನಿನ್ನೊಳಿರದು ದೋಷಗಳಿಂದು |
ಬರಿದೇಕೆ ವ್ಯಥೆ ಪಡುವೆ ||
ತರಣಿಜ ರೋಹಿಣೀ ಶಕಟ ಭೇದಿಸಲಿಂದು |
ಬರಗಾಲ ಬಂದುದಯ್ಯ || 69 ||

ವರ ಶನಿಯಲ್ಲಿಂದ ತೆರಳೆ ಸುಭಿಕ್ಷೆಯು |
ದೊರಕೊಂಬುದಯ್ಯ ಕೇಳು ||
ನಿರತ ಸದ್ಧರ್ಮವಾಚರಿಸಿ ನುತಿಸಲವ |
ಕರುಣೆದೋರುವ ನಿಜವು || 70 ||

**ಮಾರವಿ - ಏಕ**
ತೆರಳುತೆ ಜನಪತಿ | ನೆರೆ ಯೋಚಿಸಿದನು |
ತರಣಿಜನುಪಟಳವೆ ||
ಪರಿಹರಿಸದೆ ಪೋ | ದರೆ ನೃಪನೆನುವರೆ |
ತೆರಳುವೆ ಶನಿಯೆಡೆಗೆ || 71 ||

ಎಂದೆನುತಾಕ್ಷಣ | ಸ್ಯಂದನವೇರುತ |
ಲಂದೇರಿದ ಗಗನ ||
ಮಂದಗೆ ನೃಪ ಶರ | ವೃಂದವ ಸುರಿಸುತ |
ಲೆಂದನು ಕ್ರೋಧದಲಿ || 72 ||

ಎಲವೊ ಶನೀಶ್ವರ | ಸಲೆ ಹುಚ್ಚಾಟದಿ |
ಕೊಲುವೆಯ ಜನಗಳನು ||
ನೆಲ ಒಣಗುತಲಿದೆ | ಸಲೆ ಬರಗಾಲದಿ |
ತೊಲಗೆಲೊ ಶಕಟವನು || 73 ||

ಧಾರಿಣಿಯೊಳು ಕ | ಣ್ಣೀರಿಳಿಸುತ ಜನ |
ಸಾರುವರೆಮನ ಮನೆ ||
ಮಾರಣ ಶರವಿದೊ | ಹೀರುವೆನಸುವನು |
ಮೀರದಿರೆನ್ನಾಜ್ಞೆ || 74 ||

**ನಾದನಾಮಕ್ರಿಯೆ – ಅಷ್ಟ**
ಫಡ ಫಡ ಬಡ ನರಪಾಲನೇ | ಹುಲು |
ಪೊಡವಿಪರನು ಗೆಲ್ದ ಬಲುಹನ್ನೆ ||
ಹಿಡಿದೆನ್ನ ಗೆಲಲೆಂದು ಬಂದೆಯ | ಧನು |
ಪಿಡಿದೀಗ ಇದಿರಿಸಿ ನಿಂದೆಯ || 75 ||

ಖಳ ಕಾಲಕಂಜರ ಶಂಬರ | ನಾಕ |
ನಿಳಯರ ಬಾಧಿಸೆ ಬಲುತರ ||
ಕಲಹದಿ ದುರುಳರ ತರಿದೆನು | ಸುರ |
ನಿಳಯದಿ ವಿಕ್ರಮ ಮೆರೆದೆನು || 76 ||

ದಿನಪತಿ ಕುವರ ಶನೀಶ್ವರ | ಎನ್ನ |
ಕೆಣಗಲು ಉಳುವೆಯ ನೃಪರ ||
ಮನುಜರ ಪಾಡೇಂ ಮಹೇಶ್ವರ | ತಾ |
ನನುಭವಿಸಿದ ಕಷ್ಟ ಗುರುವರ || 77 ||

ಜೀವ ಮಹೇಶರ ಕಥೆಯೇಕೆ | ಬಂ |
ದವನೀಗ ದಶರಥ ತನು ಜೋಕೆ ||
ರವಿಜಾತ ಸಾರಿದೆ ತೊಲಗೀಗ | ಬಿಡು |
ವೀ ವಿಶಿಖದ ಹದ ನೋಡೀಗ || 78 ||

**ಭಾಮಿನಿ**
ಎಲವೊ ದಶರಥ ಕೇಳು ತವ ಕೂ |
ರಲಗಿಗಾನಂಜುವೆನೆ ಸಾವೆನೆ |
ತಳೆದು ಭಕ್ತಿಯೊಳೆನ್ನನರ್ಚಿಸೆ ವೊಲಿದು ಶುಭವೀವೆ ||
ಕಲಹದಲಿ ಫಲವಿಲ್ಲವೆಂದರಿ |
ತೊಲವಿನಿಂ ಪೂಜಿಸಿದ ಭೂಪತಿ |
ತೊಲಗಿದನು ಶುಭವಿತ್ತು ಸಲಹಿದ ವರ ಶನೀಶ್ವರನು || 79 ||

**ಸೌರಾಷ್ಟ್ರ - ತ್ರಿವುಡೆ**
ಒಂದು ದಿನ ಉಜ್ಜಯಿನಿಯೊಳು ನೃಪ |
ಚಂದ್ರಧರನಂತ್ರಿವಿಕ್ರಮಾರ್ಕನು |
ವಂದಿಮಾಗಧ ಪಂಡಿತೋತ್ತಮ | ರಿಂದ ಕೂಡಿ || 80 ||

ಪರಮ ಸಚಿವನು ಭಟ್ಟಿ ಸೇನಾ |
ವರನು ದುರ್ಜಯ ಸತಿ ಪ್ರಭಾವತಿ |
ಯರಸಹಿತ ವೈಭವದಿ ರಾಜ್ಯವ | ಪೊರೆದ ಜನಪ || 81 ||

ಅರಿಗಜಕೆ ಪಂಚಾಸ್ಯ ಫಣಿಪರ |
ಗರುಡನೆನಿಸಿದು ಮೆರೆಯೆ ಸಭೆಯೊಳ |
ಗಿರಲು ಕಾಪಾಲಿಕನು ಬರಲವ | ಗೆರಗಿ ನೃಪತಿ || 82 ||

ಏನು ಕಾರಣ ಬಂದಿರೈ ನಿಮ |
ಗೇನು ನನ್ನಿಂದಾಗಲಿದೆ ಪೇ |
ಳೇನು ಸಂಶಯ ಬೇಡವೆನೆ ತಾ | ನೆಂದ ಮುನಿಪ || 83 ||

**ಸುರುಟಿ - ಏಕ**
ಲಾಲಿಸು ಭೂಪಾಲ | ದಯದೊಳು |
ಪಾಲಿಸು ಗುಣಶೀಲ ||
ಮೇಳವಿಸಿರೆ ಮಖ ಖೂಳರುಪಟಳ ನಿ |
ವಾಳಿಸಿ ಪೊರೆಯೈ ಶೀಲ ಗುಣಾಢ್ಯನೆ || 84 ||

ಬಹ ಅಮವಾಸ್ಯೆ ದಿನ | ನೀನೈ |
ತಹುದೆಲೆ ಮಾನಧನ ||
ಇಹುದಾ ವನದಲಿ ಮಹ ಕಾಳಿಯ ಗುಡಿ |
ಇಹಪರಕತಿಶಯವಹ ಯಾಗವು ನೃಪ || 85 ||

**ಭಾಮಿನಿ**
ಆಗಲದಕಂಜದಿರಿ ಯಾಗ |
ಕ್ಕಾಗಮಿಪೆ ಖಳಹಾವಳಿಯ ನಾ |
ನೀಗಿಸುವೆನೆಂದವನ ಕಳುಹಿಸುತಾಗ ಭೂಪತಿಯು ||
ನಾಗಭೂಷಣನನ್ನು ನೆನೆಯುತ |
ಲಾಗ ಮುನಿ ಪೇಳಿರುವ ವೇಳೆಗೆ |
ಸಾಗಿ ಬರೆ ಕಾಣುತ್ತ ಕಪಟದ ಯೋಗಿ ಉಪಚರಿಸಿ || 86 ||

**ಬೇಗಡೆ - ಏಕ**
ನೋಡಿದೆಯ ನೃಪ ಗಿರಿಯ ಮಧ್ಯದಲಿ | ಶೋಭಿಸುವ ಮುತ್ತುಗ |
ಗಾಢತರು ತೂಗಾಡುತಿಹನಲ್ಲಿ ||
ನೋಡುವನೇ ಬೇತಾಳ ಬೆದರಿಪ |
ಗಾಢದಿಂ ಪಿಡಿತರುವುದಿಲ್ಲಿಗೆ |
ಮಾಡಿ ಮುಗಿಸುವ ಯಜ್ಞವೆನ್ನಲು |
ರೂಢಿಪಾಲಕ ನಡೆದನಲ್ಲಿಗೆ || 87 ||

ತರಿದು ಶಾಖೆಯ ಮುಳ್ಳು ಮರನೇರಿ | ಹಿಡಿದವನ ತಳ್ಳಿದ |
ಭರದಿ ಪೊತ್ತೈತರಲು ಸುರವೈರಿ ||
ಧರಣಿಪತಿ ಕೇಳೆನ್ನ ಪ್ರಶ್ನೆಗೆ |
ಅರಿದು ಉತ್ತರವೀಯದಿರೆ ತವ |
ಶಿರವು ಹೋಳಾಗುವುದು ಪೇಳ್ವಡೆ |
ತರುವನೇರುವೆನೆಂದು ಪೇಳ್ದನು || 88 ||

ಎನುತಲಿಪ್ಪತ್ನಾಲ್ಕು ಸಲ ಕೇಳೆ | ನೃಪ ಪೇಳ್ದನುತ್ತರ |
ಕೊನೆಯದೆನಗರಿದೆನುತಲವ ಪೇಳೆ ||
ಘನ ಮಹಿಮನಿವನೆಂದು ಬೇತಾ |
ಳನು ನಯದಿ ಪೇಳಿದನು ಕಪಟಿಗ |
ಮುನಿಯು ನಂಬಲುಬೇಡ ಕೊಂದಿಹ |
ಜನಪನೂರ್ವರಿಗೊಂದೆ ಕಡಿಮೆಯು || 89 ||

**ಭಾಮಿನಿ**
ಸರಸಿಯಲಿ ಮೀಯುತ್ತ ಕಾಳಿಗೆ |
ಎರಗು ನೀನೆನೆ ಮಾಡಿ ತೋರಿಸ |
ಲರುಹು ಗೈದಡೆ ಕಾಳಿಗರ್ಪಿಸು ಕಡಿದು ಖಳ ಶಿರವ ||
ಭರದಿ ದೇವಿಯು ಒಲಿಯುವಳು ನೀ |
ಸ್ಮರಿಸಿದಾಗಲೆ ಬರುವೆನೆನ್ನುತ |
ಲರುಹಿ ನೇಮವಗೊಂಡು ಸೇರಿದ ಮುತ್ತುಗದ ಮರವ || 90 ||

**ಕೇದಾರಗೌಳ - ಅಷ್ಟ**
ಬಂದಾಗ ಭೂಪತಿ ಯೆಂದನು ಮುನಿಪಗೆ |
ತಂದೆನು ಹಲವು ಬಾರಿ ||
ಹಿಂದೆ ಸಾರಿದನವನೆಂದೆನೆ ಹೋಗಲಿ |
ಮಿಂದು ಬಂದೀಗ ನೀನು || 91 ||

ವಂದಿಸು ಸಾಷ್ಟಾಂಗ ದೇವಿಗೆಂದೆನೆ ನೃಪ |
ವಂದಿಸಿದವರಲ್ಲ ನೃಪರು ||
ಮುಂದೆ ನೀನೆಸಗಲು ಹಿಂದ ಆಚರಿಸುವೆ |
ನೆಂದೆನೆ ಮುನಿಪ ತಾನು || 92 ||

ಜಲಧಿಯೊಳ್ಮೀಯುತ್ತ ಬಲವಂದು ದೇವಿಗೆ |
ಮಲಗಿ ಮುನಿಪನೊಂದಿಸೆ ||
ನೆಲನಧಿಪತಿ ಮುನಿ ತಲೆಗಡಿಯಲು ದೇವಿ |
ಒಲಿದು ಮೈದೋರಲಾಗ || 93 ||

**ವಾರ್ಧಕ (ಅರ್ಧ)**
ಜಯ ಕಾಳಿಕಾಂಬೆ ಜಯ ಸುರವಂದ್ಯೆ ಗಿರಿಜಾತೆ |
ಜಯ ಜನಾರ್ದನಿ ದುರ್ಗೆ ಚಾಮುಂಡಿ ಪರಮಶಿವೆ |
ಜಯ ಸರ್ವಮಂಗಲಾಪರ್ಣೆ ಶಾಂಭವಿ ಫಾಲಲೋಚನೆಯೆ ಶರಣು ಎನಲು || 94 ||

**ನವರೋಜು - ಏಕ**
ಧರಣಿಪತಿ ಖಳ ಮುನಿಯ | ಶಿರ |
ವರಿದವನ ಮುಗಿಸಿದನು ||
ಧರೆಗತಿ ಸುಖ ಸಮೃದ್ಧಿಗಳೊದಗಿತು |
ನೆರೆ ಸಂತೋಷಿಪೆ ವರ ಬೇಡೆನೆ ನೃಪ || 95 ||

ಜಯ ಜನನಿ ಮಹ ಮಾಯೆ | ನೀ |
ದಯದೋರಿದೆಯ ತಾಯೆ ||
ಬಯಕೆಗಳಿಲ್ಲವು ನೋಡಿದೆ ತವಪದ |
ಜಯಿಸಿದೆ ಭವಭಯ ಎಂದೆನುತೆರಗಿದ || 96 ||

**ಭಾಮಿನಿ**
ಮಗನೆ ಮೆಚ್ಚಿದೆ ನಿನ್ನ ಗುಣಗಳ |
ನಗಹರಂಗೆಣೆಯಾಗಿ ಭುವಿಯನು |
ಸೊಗದಿ ಸಾಸಿರ ಕಾಲವಾಳೆಂದ್ಹರಸಿ ಮೃಗರೆಯೆ ||
ಜಗತಿಪತಿ ನಡೆತಂದು ನಡೆದಿಹ |
ಒಗೆಯ ಸಚಿವಗೆ ತಿಳುಹಲೆಂದನು |
ನಗುತ ನಾನಿತ್ತಪೆನು ಸಾಸಿರ ವರುಷ ಮಗುಳೆನಲು || 97 ||

**ಸೌರಾಷ್ಟ್ರ - ತ್ರಿವುಡೆ**
ಜನಪ ನೀನಾರ್ಮಾಸ ಸಿಂಹಾ |
ಸನದಿ ಕುಳಿತಿರು ಉಳಿದ ಕಾಲದಿ |
ನೆನೆದು ಶಿವೆಯೆನ್ನಿತರ ಕಾರ್ಯದಿ | ಮನವನಿರಿಸು || 98 ||

ಗಿರಿಜೆಯಾಡಿದ ನುಡಿಹುಸಿಯದೆನೆ |
ಧರಣಿಪತಿ ತೋಷಿಸಿದ ಸಭೆಯಲಿ |
ವರ ಪುರೋಹಿತರೈದೆ ನಮಿಸ | ಲ್ಯೊರೆದರಿನಿತು || 99 ||

**ಕೇದಾರಗೌಳ - ಅಷ್ಟ**
ಧರಣಿಪ ಲಾಲಿಸು ಪರಿಕಿಸೆ ಜಾತಕ |
ವರಿತೆನು ಗ್ರಹಗತಿಯ ||
ತರಣಿಜ ದ್ವಾದಶ ಭರದಿ ಸೇರುವನಯ್ಯ |
ಅರುಹಲೆಂದೈದಿದೆನು || 100 ||

ರುದ್ರರೂಪನು ಶನಿ ಭದ್ರಕಾಯನು ಬಹು |
ಕ್ಷುದ್ರಕಾಯನು ನಿಂದಿಸೆ ||
ಶುದ್ಧ ಮನದಿ ನುತಿಸಿದ ಜನದ ಕಷ್ಟ |
ತಿದ್ದುವ ಗುಣವಂತನು || 101 ||

**ಭಾಮಿನಿ**
ನೀಲವರ್ಣನು ನಿರ್ಮಲಾತ್ಮನು |
ತಾಳಲಾಗದು ಮುನಿದನಾದರೆ |
ಕಾಲಸಹಜನು ಸೂತ ಸಹಿಸಲಿ ಪಿತನ ಬಾಧಿಸಿದ ||
ಹಾಳು ಮೇಲುಗಳೆರಡನೊದಗಿಪ |
ಕಾಲಕಾಲನ ಕೂಡ ಬಾಧಿಪ |
ಶೀಲ ವಾಯಸರೂಢನಾತಗೆ ಸರಿಯ ಗ್ರಹರಿಲ್ಲ || 102 ||

**ಕೇದಾರಗೌಳ - ಝಂಪೆ**
ಎಂದ ಮಾತನು ಕೇಳುತ | ನಗುತಾಗ |
ಲೆಂದ ವಿಕ್ರಮನು ಮಾತ ||
ಮಂದನನು ಹೊಗಳಬೇಡ | ಪಡೆದ ಪಿತ |
ನೆಂದು ಬಿಡದಿಹನು ಮೂಢ || 103 ||

ಕರುಣವಿಲ್ಲದೆ ಪೀಡಿಪ | ಪಾಪಗ್ರಹ |
ಪರಮನೆಂತಹನು ಕೋಪ ||
ಭರಿತನವ ಧರ್ಮ ರಹಿತ | ವಕ್ರಾಂಗ |
ದುರುಳ ಶನಿ ಜನರಿಗಹಿತ || 104 ||

ಜರೆಯದಿರು ಶನಿಯನಿನಿತು | ಕೋಪವನು |
ತರಹರಿಸಲಾಗದಿನಿತು ||
ಸಿರಿ ಧೈರ್ಯ ಸಾಹಸಗಳು | ವ್ಯರ್ಥವೈ |
ಧರೆಯೊಳವಗಿದಿರಿಲ್ಲವು || 105 ||

ಬಿಡು ಬಿಡೆಲೊ ಬಡ ಹಾರುವ | ಶನಿಕಾಟ |
ನಡೆಯದೆನ್ನೊಳಗಾ ಗ್ರಹ ||
ಮೃಡನರಸಿ ಬೇತಾಳರ | ದಯವಿಹುದು |
ಕೆಡುಕನೆಸಗುವನೆ ಶೂರ || 106 ||

**ಭಾಮಿನಿ**
ವಿಕ್ರಮಾರ್ಕನು ನುಡಿದ ವೇಳೆಗೆ |
ಅರ್ಕಸಂಭವ ಗಗನಯಾನದಿ |
ನಿಷ್ಕ್ರಮಿಸುತಿರೆ ಕೇಳಿ ಕೆಂಗಿಡಿ ಸೂಸಿ ಘುಡುಘುಡಿಸಿ ||
ತಕ್ಷಣವೆ ಧರೆಗಿಳಿದು ಬಂದಾ |
ವಿಕ್ರಮನ ಸಭೆಗೈದಿ ವರ ನರ |
ಚಕ್ರಿಯಂದದಿ ಕೆರಳಿ ಗರ್ಜಿಸಿ ನುಡಿದನಿಂತೆನುತ || 107 ||

**ಮಾರವಿ - ಏಕ**
ಪೊಡವಿಪನೆನುತಲಿ ಕಡುತರ ಗರ್ವದಿ |
ಕೆಡು ನುಡಿ ನುಡಿದಿಹೆಯ ||
ಬಡವೆಯೆ ಎನ್ನನು ಬಡಗ್ರಹವೆಂದೆಯ |
ಬಿಡುವೆನೆ ನಿನ್ನುವನು || 108 ||

ಎನ್ನಯ ಮಹಿಮೆಗಳನ್ನೇನರಿತಿಹೆ |
ಪನ್ನಗಧರ ರವಿಯ ||
ಸನ್ನುತ ಗುರು ಅಜ ರನ್ನರೆ ಬಾಧಿಪ |
ಉನ್ನತ ಗ್ರಹ ನಾನು || 109 ||

**ಶಂಕರಾಭರಣ - ಏಕ**
ಅರಿಯದಾದೆ ನಿನ್ನ ಮಹಿಮೆ |
ಜರದೆನಿಂದು ಕ್ಷಮಿಸು ಎನ್ನ |
ಪೊರೆಯೊ ದೇವ ಕರುಣೆದೋರೆಂ | ದರಸ ನುತಿಸಿದ || 110 ||

ಆಗದಾಗದೆಲವೊ ನಿನ್ನ |
ನೀಗ ಕ್ಷಮಿಸೆ ಎನ್ನ ಮಹಿಮೆ |
ಹೇಗೆ ತಿಳಿವೆ ಮೂಢ ನಿನಗೆ | ತಾಗದೇ ಬಿಸಿ || 111 ||

ನೀಚ ಮದದಿ ಹಿಂದು ಮುಂದು |
ಯೋಚಿಸದೆನ್ನ ಬೈದು ನುಡಿದು |
ನೀ ಚರಣವ ಪಿಡಿಯೆ ಬಿಡೆನು | ಗೋಚರಿಸುವೆನು || 112 ||

**ಕಂದ**
ಎಂದೆನುತಾಗಲೆ ತೆರಳೆ ವ |
ಸುಂಧರೆಯಧಿಪತಿ ಮನದೊಳು ಚಿಂತಿಸುತಾಗಂ ||
ತಂದುದೆ ವಿಧಿಯೀ ತೆರದೊಳು |
ಮುಂದೇಂ ಗೈಯಲಿ ಶಿವ ಶಿವ ಎನುತಲೆ ಭೂಪಂ || 113 ||

**ಮುಖಾರಿ - ಅಷ್ಟ**
ಏಗೈವೆನಯ್ಯೊ ಮೃಡನೆ | ಹೀನನಂತೆ ನುಡಿದೆನೇಕೆ |
ಭಾನುತನುಜ ಮುನಿದ ಮೇಲೆ | ಕಾಣೆ ಸುಖದ ದಾರಿಯ || 114 ||

ಹರನ ರಾಣಿ ವರವನೀಯೆ | ಧರಣಿಪಾಲನೆಂದು ಗರ್ವ |
ಧರಿಸಿ ನುಡಿಯೆ ಒದಗಿ ಬಂತು | ಪರಮಕಷ್ಟ ದುರ್ಗತಿ || 115 ||

ಕರುಣದಿಂದ ಪ್ರಜರ ಪೊರೆದೆ | ಪರಮ ಸತ್ಯ ಧರ್ಮ ಬಿಡದೆ |
ಹರಿಯು ಹರನು ಗಿರಿಜೆಯೆ | ನ್ನೊಳಿರಿಸಿ ದಯೆಯ ಪೊರೆಯಲಿ || 116 ||

**ಭಾಮಿನಿ (ಅರ್ಧ)**
ಸರಿಯೆ ಕೆಲದಿನ ಮರೆತ ಭೂಪತಿ |
ಪುರದೊಳೋರುವ ಯವನ ದೇಶಿಗ |
ತುರಗ ಮಾರುತ ಬಂದು ಭೂಪತಿಯಿದಿರು ಕಾಣಿಸಿದ || 117 ||

**ನಾದನಾಮಕ್ರಿಯೆ - ಏಕ**
ಕೈಸ ಘೋಡ ದೇಖೊ ಬೈಯ್ಯ |
ಪೈಸ ಹೋನ ಬೇಜ್ತ ಹೂಂ ಮೈ |
ಪಸಂದ್ ಹೈ ಸವಾರಿ ಕರ್ಕೆ ದಿಲ್ಕೆ ಖುಶ್ ಹೋತಾ || 118 ||

ಅರಬಿ ದೇಶ್ ಸೆ ಲಾಯಾ ಹೂಂ ಮೈ |
ಚಢ್ನೆ ವಾಲಾ ರಾಜಾ ಕೋನ್ ಹೈ |
ಅಚ್ಚ ಘೋಡ ಹೈ ನ ದೇಖೋ ಲಾ ಸೆವಾಲಾವೋ || 119 ||

ಇಸ್ಕ ಮೌಲ್ಯ ಏಕ್ ಲಾಕ್ ರೂಪ್ಯಾ |
ಲೇನೇ ಮೇರೇ ಜುಲುಂ ನಹೀಂ |
ದೂಸ್ರೇ ಗಾಂವ ಕೊ ಜಾತಾ ಹೈ ಮೈ ಡೇರಿ ಕರ್ ನಕೊ || 120 ||

**ಕೇದಾರಗೌಳ - ಅಷ್ಟ**
ಇನಿತು ಕೂಗುತಲಿಹ ವಣಿಕನ ಕರೆಯುತ್ತ |
ಜನಪಾಲ ಕೇಳಿದನು ||
ಜನ ಮನ ಸೆಳೆಯುವ ಘನಹಯವೆಲ್ಲಿಂದ |
ಗುಣವೇನು ಪೇಳಿದರ || 121 ||

ಜನಪಾಲ ಲಾಲಿಸು ಅರಬಿದೇಶದ ಹಯ |
ಘನವೇಗ ಶಾಲಿಯಿದು ||
ಕ್ಷಣ ಮಾತ್ರದಲಿ ಲೋಕ ಚರಿಸಲಿಪ್ಪುದು ಬೆಲೆ |
ಧನವೊಂದೆ ಲಕ್ಷವಯ್ಯ || 122 ||

ತುರಗವೇರುತಲೀಗ ಪರಿಕಿಸಬಹುದೆನೆ |
ಧರಣಿಪನೇರಿದನು ||
ಭರದಿ ಗಗನಕೇರಿ ಸರಿದುದನಿಲವೇಗ |
ತರಹರಿಸಿದ ನೃಪನು || 123 ||

ಪೊಡವಿಪನಂಕೆಯ ಕಡೆಗಣಿಸುತ ಹಯ |
ನಡೆದು ಘೋರಾರಣ್ಯದಿ ||
ಕೆಡವಿದು ಕಮರಿಯೊಳಡಗಿತೇನೆಂಬೆನು |
ಕಡು ಶೋಕಗೊಂಡು ನೃಪ || 124 ||

**ಕಾಂಭೋದಿ – ರೂಪಕ**
ಏನ ಮಾಡಿದೆ ವಿಧಿಯೆ ಶಿವಶಿವ |
ಮಾನವಾಧಿಪ ಘೋರಾರಣ್ಯದಿ ||
ಶ್ವಾನ ಜಂಬುಕ ಅಲೆವ ತೆರದಲಿ |
ಕಾಣೆ ಮಾರ್ಗವನೂರ ಸೇರಲು || 125 ||

ಏಕೆ ಹಯವನು ತಂದನಾತನು |
ಏಕೆ ಬಯಸಿದೆ ಏರ್ದೆನದರನು ||
ಕಾಕುಗೊಳಿಸಿತೆ ಎನ್ನ ಜನುಮವ |
ಲೋಕದಿದಿರಲಿ ಮೂರ್ಖನಾದೆನು || 126 ||

ತರಣಿಸುತನನು ಹಳಿದ ಕಾರಣ |
ತುರಗ ರೂಪದಿ ಬಂದು ಕಾಡಿದ ||
ಸಿರಿಯು ಯವ್ವನ ದೊರೆತನಗಳುರೆ |
ಬರಿದೆ ರಕ್ಷಿಸು ಹರನೆ ಈಕ್ಷಿಸು || 127 ||

**ಮಾರವಿ - ಏಕ**
ಇತ್ತಲು ಮಂತ್ರಿಯ ಕರೆಯುತ ವಣಿಕನು |
ಎತ್ತೈದಿದ ನೃಪತಿ ||
ಹತ್ತುತ ಹಯ ಸಹಿತಡಗಿದ ಭಾಪುರೆ |
ಹೊತ್ತಾಗುವುದೆನಗೆ || 128 ||

ಕೊಡು ಮಮ ತುರಗವ ತಡೆದರೆ ಕೆಡುವಿರಿ |
ಕೊಡು ಧನ ಲಕ್ಷವನು ||
ಕೊಡದಿರೆ ವಂಚನೆ ನಡೆಸಿದಿರೆನ್ನುತ |
ನಡೆವೆನು ಲೋಕದಲಿ || 129 ||

**ಕಂದ**
ವಣಿಕನ ನುಡಿಯವಧರಿಸುತೆ |
ಧನವನ್ನಾತಗೆ ಕೊಡಿಸುತ ಕಳುಹಿದ ಸಚಿವಂ ||
ಜನಪನ ರಾಣಿ ಪ್ರಭಾವತಿ |
ಇನಿಯನ ಕಾಣದೆ ಹಲುಬಿದಳತಿ ಹಲವಿಧದಿಂ || 130 ||

**ನೀಲಾಂಬರಿ - ಏಕ**
ಹರ ಹರ ಕರುಣನಿಧೆ | ನೀನೇಕೆ ನಮ್ಮ |
ಮರೆದಿಂತು ದಯೆ ತೊರೆದೆ ||
ಪರಮ ಮಂಗಲದಾಯಕಿ | ಕಾಳಿಕಾದೇವಿ |
ವರಭಕ್ತಜನ ಪಾಲಕಿ || 131 ||

ತುರಗವೇರಿದ ನೃಪತಿ | ಕಾಣಿಸನಯ್ಯೊ |
ದೊರೆಗೀಗ ಯಾವ ಗತಿ ||
ಅರುಹುವರ್ಯಾರ ಕಾಣೆ | ನಮ್ಮೆಲ್ಲರ |
ಪೊರೆಯೊ ದೇವರ ದೇವನೆ || 132 ||

ವರ ಶನಿದೇವನನ್ನು | ನಿಂದಿಸಲಿಂತು |
ಪರಮ ಕಷ್ಟವನಿತ್ತನು ||
ಪರಿಹಾರವೆಂತಹುದು | ಭಕ್ತರಾದೆಮ್ಮ |
ಮರೆಯದೆ ಪಾಲಿಪುದು || 133 ||

**ಸುರುಟಿ - ಏಕ**
ಮರುಗುವ ರಾಣಿಯನು | ಕಾಣುತ |
ವರ ಸಚಿವನು ತಾನು ||
ಪರಿಪರಿ ಸಮಾಧಾನಗಳನು ಪೇಳಿದ |
ಅರಸನನರಸಲು ಚರರನು ಕಳುಹಿದ || 134 ||

ಕರೆಸಿದ ದುರ್ಜಯನ | ಪೇಳಿದ |
ಧರಣಿಪ ನಿರ್ಗಮನ ||
ಧರೆಯಲ್ಲಿನ ಪ್ರಜೆ ಪರಿಜನರಂ ಸಲೆ |
ದೊರೆ ಬರುವನಕರ ಕರುಣದಿ ಪಾಲಿಸು || 135 ||

ಧರೆಯೊಳು ಎಡೆಬಿಡದೆ | ಸುರಪನ |
ಸರಿಸಮ ಧರಣಿಪನ ||
ಅರಸುವೆ ಸರಿಯೆಂದೆನಲವ ತೆರಳಿದ |
ನೆರಹುತ ಸೇನೆಯ ಅರಸನನರಸಲು || 136 ||

**ಭಾಮಿನಿ**
ಅರಸ ವಿಕ್ರಮ ಮರುಗುತಿರೆ ವನ |
ಚರಿಪ ಚೋರರು ಕಂಡು ಭೂಪನ |
ಭರಿತ ರತ್ನಾಭರಣ ಅಪಹರಿಸುವರೆ ಮನದಂದು ||
ಕರುಣದೋರುವರಂತೆ ನಟಿಸುತ |
ಸೊರಗಿ ಮರುಗುವ ನೃಪನ ಬಳಿಗೈ |
ತರುತ ನಂಬಿಸಿ ಮೇಲೆ ಬೀಳಲು ಕೆರಳಿ ವಿಕ್ರಮನು || 137 ||

**ಮಾರವಿ - ಏಕ**
ಧಿರುರೇ ಚೋರ ನರಾಧಮರೇನೆಂ |
ದರಿತಿರಿ ಎನ್ನುವನು ||
ನರಗುರಿಗಳ ತಲೆಯೊಡೆಯುತ ಧನವಪ |
ಹರಿಸಿದ ಪರಿಯಲ್ಲ || 138 ||

ಖುಲ್ಲ ನರಾಧಮ ಬಿಡು ಬಾಯ್ದಂಭವ |
ಪೊಳ್ಳು ಪರಾಕ್ರಮವ ||
ನಿಲ್ಲಿಸುವೆವು ಕೊಡು ಆಭರಣಂಗಳ |
ಕೊಲ್ಲುವೆವಲ್ಲದಿರೆ || 139 ||

ಕೈಯೊಳಗಾಯುಧವಿರೆ ಮುಗಿಸುತ್ತಿಹೆ |
ಆಯುವನಿಷ್ಟರೊಳು ||
ಕಾಯಕ ತೊರೆಯತಲೋಡಿರಿ ಬೇಗನೆ |
ಸಾಯುವಿರಲ್ಲದಿರೆ || 140 ||

ಹೆಮ್ಮೆಯನಾಡದೆ ಕೊಡು ಆಭರಣವ |
ನಮ್ಮೊಳು ಹೊಡೆದಾಡಿ ||
ಒಮ್ಮೆಯು ಬದುಕಿದರಿಲ್ಲವು ಎನ್ನುತ |
ಮೈಮೇಲೆರಗಿದರು || 141 ||

**ಭಾಮಿನಿ (ಅರ್ಧ)**
ಚೋರರಾಭರಣಗಳ ಸುಲಿಯುತ |
ಸಾರಲತ್ತಲು ಬಳಲಿ ನೃಪ ಬಾ |
ಯಾರೆ ಜಲವನ್ನರಸಿ ಬರುತಿರೆ ಮುಂದೆ ಶೋಭಿಸುವ || 142 ||

**ವಾರ್ಧಕ**
ಹರಿವ ನದಿಗಿಳಿದು ನೀರ್ಗುಡಿಯುತಿರೆ ನೃಪತಿ ಭೋ |
ರ್ಗರೆದು ಪ್ರವಾಹವೈತಂದವನ ಕೊಂಡೊಯ್ದು |
ಮರನೆಡೆಯ ಸೇರಿಸಿತು ತೊಯ್ದುಡುಗೆ ಚಳಿಯು ಮೈ ಕೊರೆಯುತಿರೆ ನೃಪ ನಡುಗಿದ ||
ಮರುಗುತ್ತಿರಲು ತಾಮ್ರಲಿಂದಪುರದಾ ವಣಿಕ |
ವರ ನಂದಿಶೆಟ್ಟಿಯೈತಂದರಳಿತರುಪೂಜೆ |
ವಿರಚಿಸಿದ ಮಲಗಿಹನ ಶೈತ್ಯೋಪಚರಿಸಲ್ಕೆ ನೃಪತಿ ತಾ ಕಣ್ದೆರೆಯಲು || 143 ||

**ಕಾಂಭೋದಿ – ಅಷ್ಟ**
ಯಾರಯ್ಯ | ನೀನು | ಯಾರಯ್ಯ || ಪಲ್ಲವಿ ||
ಯಾರಯ್ಯ ನೀನಸಮಾನ್ಯ ಪುರುಷನು ||
ಸಾರಿದೆಯೆಲ್ಲಿಂದ ಏಕೆ ಬಂದವನು ||
ತೋರುವೀ ಮರದಡಿ ಮಲಗಿಹುದೇನು |
ಮೋರೆಯು ಕಳೆಗುಂದಿಹುದು ಚಿಂತೆಯೇನು || ಯಾರಯ್ಯ ||144 ||

ಈ ತಾಮ್ರಲಿಂದದೊಳೆಸೆವ ವಣಿಕನು |
ಜಾತಿ ವೈಶ್ಯನು ನಂದಿಶೆಟ್ಟಿಯೆಂಬವನು ||
ಭೀತಿಯ ಬಿಟ್ಟೆನ್ನೊಳರುಹು ನೀ ನಿಜವ |
ನಾ ತಳುವದೆ ರಕ್ಷಿಸುವೆ ನಿನ್ನ ತನುವ || ಯಾರಯ್ಯ || 145 ||

ನಾ ಬಾಹುಜನು ಎನ್ನ ಗ್ರಹಗತಿ ಕ್ರೂರ |
ನಿರ್ಭಾಗ್ಯ ನಾನು ವಿಭಾಕರ ಪೆಸರ ||
ನಾ ಬೇಡುವೆನು ಎನಗೊದಗಿಸಾಹಾರ |
ಹೇ ಭಾಗ್ಯವಂತನೆ ಮಾಡುಪಕಾರ || ಯಾರಯ್ಯ || 146 ||

ಬಾರೆಂದು ಕರದೊಯ್ದು ಗೃಹಕೆ ಆದರದಿ |
ತೋರುತ ಭಾಮೆಗೆ ಪೇಳಿದ ವರದಿ ||
ಚಾರು ಭೋಜನವಿತ್ತು ಉಪಚರಿಸನಲು |
ತೋರುತ ಸಿಡುಕನು ಬಡಬಡಿಸಿದಳು || ಯಾರಯ್ಯ || 147 ||

**ವಾರ್ಧಕ**

ಸುಂದರನ ಮನೆಯಲ್ಲಿ ತಂದಿರಿಸಲೊಳಿತೇನು |
ಒಂದಿನಿತು ಮತಿಯಿಲ್ಲ ಸುಂದರಿಯು ಸುಕುಮಾರಿ |
ಯೆಂದೆನಲು ಸುತೆಗವನ ಹೊಂದಿಸುವೆ ನೋಡೆನಲ್ ಸತಿಯೊಪ್ಪಿ ಸುಮ್ಮಗಿರಲು ||
ನಿಂದು ಮರೆಯಲಿ ನೃಪನ ಸೌಂದರ್ಯವನ್ನೀಂಟಿ |
ಮುಂದಿವಂ ಪತಿಯಾಗೆ ತನ್ನ ಭಾಗ್ಯಕ್ಕಾನ |
ಕುಂದಿರದು ಎಂದೆಣಿಸುತಾಲೋಲಿಕೆಯು ಬಂದು ಪಿತಗೆರಗೆ ತಕ್ಕೈಸುತ || 148 ||

**ಮಧುಮಾಧವಿ - ತ್ರಿವುಡೆ**

ಚಂದಿರಾನನೆ ಮಗಳೆ ಬಾ ಬಾ |
ಕುಂದ ಕುಟ್ಮಲ ರದನೆ ಬಾ ಬಾ |
ಮಂದಗಾಮಿನಿ ಇಂದು ನೀನೈ |
ತಂದ ಕಾರಣ ತಿಳುಹಿಸು || 149 ||

ತಂದೆ ಲಾಲಿಸು ನಮ್ಮ ಉಪವನ |
ಕುಂದಲತೆಗಾಧಾರವಿಲ್ಲದೆ |
ಚಂದವಿರದಾರವನು ಏಕೈ |
ತಂದಿರುವ ಬಹು ಸುಂದರ || 150 ||

ಮಗಳೆ ತಿಳಿದೆನು ಅಂತರಂಗದ |
ಬಗೆಯನವ ನಿನಗೊಪ್ಪಿದನೆ ಬಹು |
ಸೊಗಸು ನೀನವನನ್ನು ಸಂಧಿಸು |
ವಿಗಡನನು ನೀನೊಪ್ಪಿಸು || 151 ||

ಕಳುಹುವೆನು ನಾನವನ ಶಯ್ಯೆಗೆ |
ಅಳುಕದೈದುತಲವನ ಮೋಹಿಸು |
ಬಳಿಕ ಲಗ್ನವ ಗೈವೆನೆನುತಲಿ |
ಕಳುಹೆ ನೃಪನೆಡೆ ಸಾರುತ || 152 ||

**ಭಾಮಿನಿ**

ಮಾನನಿಧಿ ವಿಶ್ರಮಿಸುವೆಡೆ ಈ |
ಸ್ಥಾನವನುಮಾನಿಸದೆ ಸುಖಿಸೆನು |
ತಾ ತೆರಳೆ ನೃಪ ಮಲಗಲಾಲೋಲಿಕೆಯು ಸಿಂಗರದಿ ||
ತಾನು ಸರ್ವಾಭರಣ ಧರಿಸುತ |
ಮಾನಿನಿಯು ಹೂ ಗಂಧವನು ಹರಿ |
ವಾಣದಲಿ ಪಿಡಿಯುತ್ತ ಬಂದಳು ಮದನನಾನೆಯೊಲು || 153 ||

**ಕಂದ**
ನಿದ್ರಿಪ ನೃಪನಂ ಕಾಣುತೆ |
ಭದ್ರೆಯು ಸಂತಸ ತಳೆಯುತೆ ಮನದೊಳಗಾಗಂ ||
ಸದ್ರಾಗದ ತೆರ ಬಳಿಯಂ |
ಹೊದ್ದುತ ನಿರುಕಿಸುತವನನು ಮಗುಳಿಂತೆಂದಳ್ || 154 ||

**ನವರೋಜು - ಏಕ**
ಎಂಥಾ ಸುಂದರನಿವನು | ನಾ |
ನೆಂತಿವನ ಹೊಂದುವೆನು ||
ಕಂತುವಿನಿಂ ಶತಮಡಿ ಸೊಬಗುಳ್ಳವ |
ನೆಂತಿವನನ್ನಜ ಸೃಜಿಸಿದ ಭಲರೆ || 155 ||

ಕಣ್ಣುಗಳೊ ಕಮಲಗಳೊ | ತುಟಿ |
ಹಣ್ಣೊ ಸಂಪಗೆ ಮೂಗೋ ||
ಹುಣ್ಣಿಮೆ ಶಶಿಮೊಗ ನುಣ್ಣಗೆ ಕದಪುಗಳ್ |
ಹೆಣ್ಣುಗಳ್ ಸೋಲದೆ ಮಾಣ್ಬರೆ ಶಿವ ಶಿವ || 156 ||

ಎಬ್ಬಿಸಲು ಕೋಪಿಪನೊ | ನಾ |
ತಬ್ಬಿಕೊಳೆ ಏನಹನೋ ||
ಉಬ್ಬುತಲಿದೆ ಮನಗೊಬ್ಬನು ಸಹಿಸೆನು |
ಕಬ್ಬಿಲ್ಲನು ಶರವಸೆಯುತ ಕೊಲುವನು || 157 ||

**ಭಾಮಿನಿ**
ಬಾಲೆ ಯೋಚಿಸಿ ತನ್ನ ಮುತ್ತಿನ |
ಮಾಲೆಗಳ ತೆಗೆದಿರಿಸಿ ನೃಪತಿಯ |
ಕಾಲದೆಸೆಯಲಿ ಮಲಗಿ ನಿದ್ರಿಸಲಾಗ ನೃಪನೆದ್ದು ||
ಶೀಲ ಯೋಚಿಸುತಿರಲು ಮುತ್ತಿನ |
ಮಾಲೆಗಳ ಚಿತ್ತಾರ ಹಂಸವು |
ಲೀಲೆಯಲಿ ನುಂಗುವುದ ಕಾಣುತಲರಸ ಬೆರಗಾದ || 158 ||

ಅನಿತರಲಿ ಎಚ್ಚತ್ತು ತರುಣಿಯು |
ಜನಪತಿಯ ಕಾಣುತ್ತ ಲಜ್ಜೆಯನನುಗೊಳಿಸಿ
ನೆಲ ಗೀಚುತಿರೆ ನೃಪ ಕಂಡು ಬೆಸಗೊಂಡ || 159 ||

**ಕೇದಾರಗೌಳ – ಝಂಪೆ**
ನಳಿನಾಕ್ಷಿ ಯಾರೆ ನೀನು | ಬಂದಿಲ್ಲಿ |
ಸುಳಿದಾಟವಾಡ್ವುದೇನು ||
ಚೆಲು ಯೌವನಾಂಗಿ ಹೀಗೆ | ಮರುಳಾಟ |
ಗಳ ನಡೆಸೆ ಸೊಗಸೆ ಹೇಗೆ || 160 ||

ಪಿತ ನಂದಿ ಶೆಟ್ಟಿ ಎನ್ನ | ಸಜ್ಜೆವನೆ |
ಹಿತದಿ ನಿದ್ರಿಸುವ ನಿನ್ನ ||
ಮತಿ ಸೂರೆಯಾದುದಯ್ಯ | ನೀನೆನಗೆ |
ಪತಿಯಾಗಿ ಸುಖಿಸು ಜೀಯ || 161 ||

ಏನಿದೇನೆಂಬೆ ನೀರೆ | ನಿನ್ನಂಥ |
ಮಾನಿನಿಗೆ ತರವೆ ಬೇರೆ ||
ಜಾಣೆ ನೀ ಪೋಗು ಬೇಗ | ಪಿತನರಿಯೆ |
ಗೋಣನರಿದಪನು ಈಗ || 162 ||

ಎನ್ನ ಮನಕೊಪ್ಪಿದವನ | ವರಿಸಲ್ಕೆ |
ಮುನ್ನೊಪ್ಪಿಗೆ ಇದೆ ಪಿತನ ||
ಎನ್ನ ಮನ ಸೂರೆಯಾಗೆ | ಬಂದೀಗ |
ನಿನ್ನ ಸೇರಿರುವೆ ಹೀಗೆ || 163 ||

ಹಾಲುಂಡ ಮನೆಗೆ ನಾನು | ಎರಡೆಣಿಸೆ |
ಮೇಲುಂಟೆ ಪೇಳು ನೀನು ||
ಹಾಳು ಕೆಲಸವಿದೇತಕೆ | ನೀ ತೆರಳು |
ಹಾಳಾಗಬೇಡ ಜೋಕೆ || 164 ||

ಸೋತು ಬಂದಳ ತೆಜಿಸಲು | ದೊರಕದೇಂ |
ಪಾತಕವು ತಿಳಿದು ಪೇಳು ||
ಈ ತನಕ ಪರಿಶುದ್ಧಳ | ತೊರೆದಪೆಯ |
ಆತುರದಿ ಬಂದೀರ್ಪಳ || 165 ||

ಆಗದಾಗದು ಎನ್ನನು | ನೀ ಕಾಡ |
ಲಾಗದೆಲೆ ಬೇಡ್ವೆ ನಾನು ||
ಹೋಗು ಹೋಗೆಲೆಗೆ ನೀನು | ನಿದ್ದೆ ಬಹು |
ದೀಗೆನುತ ಮಲಗಲವನು || 166 ||

**ಸೌರಾಷ್ಟ್ರ - ತ್ರಿವುಡೆ**
ವನಿತೆ ಚಿಂತಿಸಿ ಬಳಿಕ ತನ್ನಯ |
ಕನಕ ಮೌಕ್ತಿಕ ಮಾಲೆ ಕಾಣದೆ |
ಮುನಿದು ಕೇಳ್ದಳಿದೇನು ಎನ್ನಾ | ಭರಣವೆಲ್ಲಿ || 167 ||

ವನಿತೆ ಕೇಳೆಲೆ ಕಂಡೆ ಚೋದ್ಯವ |
ಕನಕದಾಭರಣಗಳ ನುಂಗಿತು |
ಚಣದೊಳದೊ ಆ ಹಂಸಬೊಂಬೆಯು | ಎನಲು ಕೆರಳಿ || 168 ||

**ತೋಡಿ - ಅಷ್ಟ**
ಏನೆಂದೆ | ಚೋರ | ಏನೆಂದೆ || ಪಲ್ಲವಿ ||
ಏನು ಮುತ್ತಿನ ಮಾಲೆ ಚಿತ್ರ ನುಂಗುವುದೆ |
ಕಾಣೆನು ಪಾಪಿಯೆ ಲೋಕ ಮೆಚ್ಚುವುದೆ ||
ಹೀನ ನೀ ಹಾಲುಂಡ ಮನೆಗೆರವಾದೆ |
ಏನಯ್ಯ ನೀ ಬಗೆದಂತೆ ದಕ್ಕುವುದೆ || ಏನೆಂದೆ || 169 ||

ತಂದೆಯ ಕರೆದೆಂದಳಯ್ಯಯ್ಯೊ ಎನ್ನ |
ಕುಂದಣದಾಭರಣಗಳೆಲ್ಲವನ್ನ ||
ನಿಂದೆಗೆ ಹೇಸದೆ ಅಪಹರಿಸಿದನು |
ತಿಂದಿತು ಚಿತ್ರದ ಹಂಸವೆನ್ನುವನು || 170 ||

**ಶಂಕರಾಭರಣ - ಮಟ್ಟೆ**
ನಂದಿಶೆಟ್ಟಿ ಕೇಳ್ದು ಕೆರಳು |
ತೆಂದನೆಲವೊ ಪಾಪಿ ಮಗನೆ |
ತಿಂದ ಕೂಳ ಮರೆತು ಇಂಥ | ದೊಂದು ಗೈದೆಯ || 171 ||

ದೀನತನವ ನಟಿಸಿ ಬಂದು |
ನೀನೆ ಕದ್ದು ರತುನಾಭರಣ |
ತಾನೆ ಹಂಸ ತಿಂದಿತೆಂಬ | ಜಾಣತನ ಸುಡು || 172 ||

**ಭಾಮಿನಿ**
ದರದರನೆ ಎಳೆದೊಯ್ದು ಆತನ |
ಧರಣಿಪಾಲಕ ಚಂದ್ರಸೇನಗೆ |
ಅರುಹಿದನು ಖಳನಿವನು ಮಗಳಾಭರಣ ಕದ್ದಿಹನು ||
ಕರುಣೆದೋರುತ ಅನ್ನವಿಕ್ಕಿದೆ | ದುರುಳನಿವನೆಂದರಿಯದಾದೆನು |
ತರುಣಿಯಾಭರಣಗಳ ಕೊಡಿಸುತ ಶಿಕ್ಷಿಪುದು ಖಳನ || 173 ||

**ಕೇದಾರಗೌಳ - ಅಷ್ಟ**
ಯಾರು ನೀನೆಲೆ ನಿನ್ನ ಊರುಕೇರಿಗಳೆಲ್ಲಿ |
ಮಾರನಂತಿರುವೆಯಲ್ಲ ||
ಕಾರುಣ್ಯದಿಂದನ್ನವಿಕ್ಕಿದ ಮನೆಯಲ್ಲಿ |
ಚೋರತನವ ಗೈದೆಯಾ || 174 ||

ಇಂದ್ರನಂತಿಹ ನೃಪ ಸಾಂದ್ರಗುಣಾಕರ |
ಚಂದ್ರಸೇನನೆ ಕೇಳಯ್ಯ ||
ಇಂದು ನಾ ತಿರುಕ ವಿಭಾಕರನೆಂಬರು |
ಹಿಂದೊಬ್ಬ ಘನವಂತನು || 175 ||

ವಿಧಿಯು ಮೀರಲು ಸಲ್ಲದೊದಗಿತು ಕಷ್ಟವು |
ಬದುಕಿಸಿದನು ಶೆಟ್ಟಿಯು ||
ಚದುರ ಹಂಸವು ನುಂಗಿತಾಭರಣವ ಕಂಡೆ |
ಅದುಭುತವಿದು ಸತ್ಯವು || 176 ||

ಚೋರ ನೀನಲ್ಲದೆ ಬೇರೆ ಕದ್ದವರಾರು |
ಸಾರಿದರಿಲ್ಲವಲ್ಲ ||
ಧಾರಿಣಿಯೊಳು ಚಿತ್ರ ಹಾರ ನುಂಗುವುದುಂಟೆ |
ಸಾರಿ ಪೇಳಿದೆಯೊಪ್ಪಿಸು || 177 ||

ಕಳ್ಳ ನಾನೆಂಬರೆ ಎಲ್ಲಿಹುದೈ ವಸ್ತು |
ಬಲ್ಲಿದ ನೃಪತಿ ಪೇಳು ||
ಸೊಲ್ಲಿಸಲಪವಾದ ಎಲ್ಲಿಂದ ತಹುದೀಗ |
ಸುಲ್ಲಲಿತಾಭರಣ || 178 ||

**ಮಾರವಿ - ಏಕ**
ಕದ್ದವನೆಂಬನೆ ಬದ್ಧವನೆಂದಿಗು |
ಸಿದ್ಧವು ತಸ್ಕರನು ||
ಕದ್ದಿಹ ಒಡವೆಗಳಿದ್ದಂತೊಪ್ಪಿಸು |
ಬದ್ಧದಿ ಬಂಧಿಸುವೆ || 179 ||

ನೀತಿಗೆ ಬಾಹಿರವೀ ತೆರದಾಜ್ಞೆಯು |
ಏತರ ಧರ್ಮವಿದು ||
ಪಾತಕಿ ನೀಚರ ಮಾತನು ಕೇಳುತ |
ಖಾತಿಯೊಳಾಡುವುದೆ || 180 ||

ಚೋರಗೆ ನಾ ದಯೆದೋರಿದೆನಾದಡೆ |
ಧಾರಣಿಪತಿಯಹನೆ ||
ಯಾರೆಲೆ ಒಯ್ದೀ ಚೋರನ ತರಿಯಿರಿ |
ದಾರಿಯೊಳ್ ಕರಚರಣ || 181 ||

ಮೂಢ ನೃಪಾಲಕ ನೋಡದೆ ಸತ್ಯವ |
ಮಾಡಿದಡನ್ಯಾಯ ||
ಕೇಡಿಗೆ ದುಷ್ಫಲ ಕಾಡದಿರದು ಬಿಡು |
ಮಾಡಿಸು ಶಿಕ್ಷೆಯನು || 182 ||

**ಭಾಮಿನಿ**
ಧಾರಿಣಿಪ ಕೋಪದೊಳಗೀತಗೆ |
ನೀರು ಅನ್ನವನೀಯಲಾಗದು |
ತೋರದಿರಿ ದಯಮಿವನ ಕರಚರಣಗಳ ತರಿದೊಗೆದು ||
ತೋರಬೇಕೈ ಕುರುಹನೆನಲಾ |
ಕ್ರೂರ ಕಟುಕರು ಒಯ್ದು ಮಾರ್ಗದಿ |
ಮೀರಿದುತ್ಸಾಹದಲಿ ಕರಚರಣಗಳ ಕತ್ತರಿಸೆ || 183 ||

**ನೀಲಾಂಬರಿ - ರೂಪಕ**
ಹರಹರ ವಿಧಿಯೇನೊರೆಯಲಿ | ಕರಚರಣಗಳು ಪೋದವು |
ನಿರಶನದಿಂ ಸಾಯುವ ಗತಿ | ದೊರಕಿತೆ ಪರಶಿವನೆ ||
ಪರಹಿತ ಸದ್ಧರ್ಮದಿ ನಡೆ | ದಿರಲೆಂತೊದಗಿತೆ ಕಷ್ಟವು |
ಧರಣಿಪನೆನ್ನನು ಕೇಳುವ | ರಿರದಂತಾದುದಲ || 184 ||

ಏತಕೆ ಶನಿಯನು ಜರೆದನೊ | ಏತಕಹಂಕಾರವು ಎನ |
ಗೇತಕೆ ಮತಿ ಮಸಣಿಸಿತೊ | ಪಾತಕಿಯಾದೆನಲ ||
ಏತಕೆ ಉಮೆ ದಯ ತೊರೆದಳೊ | ಬೇತಾಳನು ತಾ ಮರೆದನೊ |
ಭೂತಳದಲಿ ಅವಮಾನದೊ | ಳೀತೆರ ಸಾಯುವುದೆ || 185 ||

**ಭಾಮಿನಿ (ಅರ್ಧ)**
ಇನಿತು ನೃಪನತಿ ರೋದಿಸುತ್ತಿರೆ |
ದನುಜ ಜಂಡಾಸುರನು ತೋಷದಿ |
ವನದೊಳಗೆ ಮೃಗಬೇಟೆಯಾಡುತ ಬಂದನಾಕ್ಷಣದಿ || 186||

**ಭೈರವಿ - ಝಂಪೆ**
ಏನಿದಚ್ಚರಿ ಭಳಿರೆ | ಕಾನನದಿ ಸೂಸುತಿದೆ |
ಮಾನವರ ವಾಸನೆಯು | ಪುರಹರನ ದಯದಿ || 187 ||

ಮಾನವರ ಮಾಂಸವನು | ಮೆಲದೀಗ ಬಹಳ ದಿನ |
ಏನೆ ನಲಿ ಪುಣ್ಯ ಬಯ | ಸದೆ ಬಂದ ಮಝರೆ || 188 ||

ಎಂದು ಬಾಯ್ದೆರೆಯುತ್ತ | ಬಹ ಖಳನ ನೋಡಿ ಮನ |
ನೊಂದು ನೃಪ ಕರಚರಣ | ವಿರದೇನ ಗೈವೆ || 189 ||

ಇಂದಿವನ ಸಂಹರಿಸ | ಲೆಂದು ಬೇತಾಳನನು |
ವಂದಿಸುತ ನೆನೆಯಲ್ಕೆ | ಬಂದು ಕಾಣಿಸಿದ || 190 ||

ಏಕೆನ್ನ ನೆನೆದ ನೃಪ | ವ್ಯಾಕುಲವ ಬಿಡು ನಿನ್ನ |
ಶೋಕವನು ಪರಿಹರಿಪೆ | ಪೇಳಿಗಲೆನಲು || 191 ||

ಕಾಕು ಖಳನದೊ ಬಂದು | ಸೋಕುತಿಹ ತಿನಲೆಂದು |
ನೀ ಕೊಂದು ಬಾರೆನಲು | ನಡೆದ ಆರ್ಭಟಿಸೀ || 192 ||

**ಶಂಕರಾಭರಣ – ಮಟ್ಟೆ**
ಆರರೆ ಖುಲ್ಲದನುಜ ಭಳಿರೆ |
ಕರಗಳಿಲ್ಲದವನ ಕೊಂದು |
ಧರಣಿಯೊಳಪಹಾಸವೇಕೆ | ಧುರಕೆ ನಿಲ್ಲೆಲಾ || 193 ||

ಭಳಿರೆ ಬಂದ ಧೂರ್ತನಾರು |
ತಳುವದೀಗಲುಸುರು ಬೇಗ |
ಹಳೆಯ ನಂಟುತನವದೇನು | ಕೊಲುವೆ ಮೊದಲೊಳು || 194 ||

ದುರುಳ ಕೇಳ್ಬೇತಾಳ ನಾನು |
ಧರಣಿಪಾಲ ವಿಕ್ರಮಾರ್ಕ |
ಕರೆಯೆ ಬಂದೆ ನಿನ್ನ ಸೀಳಿ | ಕರುಳ ತೆಗೆವೆನು || 195 ||

ದುರುಳ ಖಳನು ತರುವ ಮುರಿದು |
ಶಿರಕೆ ಬಡಿಯೆ ತಪ್ಪಿ ತಿವಿದ |
ಧುರದಿ ಹೆಣಗೆ ಖಳನ ತರಿದು | ಬಂದು ನುಡಿದನು || 196 ||

ಧರಣಿಪಾಲ ಶನಿಯ ಬಾಧೆ |
ಇರುವುದಿನ್ನು ಸ್ವಲ್ಪ ಕಾಲ |
ನಿರತ ಭಕ್ತಿಯಿಂದ ಭಜಿಸು | ಪೊರೆವ ನಿನ್ನನು || 197 ||

ಎನುತಲೌಷಧವನು ತೊಡೆದು |
ವನದ ಫಲಗಳನ್ನು ತಂದು |
ತಿನಿಸೆ ಹಸಿವು ಅಡಗಲಾತ | ನಮಿಸಿ ತೆರಳಿದ || 198 ||

**ಭಾಮಿನಿ**
ತರಣಿಸುತ ಶನಿದೇವ ಸದ್ಗುಣ |
ಶರಧಿ ಕರುಣಾಕರ ಸುಖಂಕರ |
ಶರಣಜನ ಸುರಧೇನು ಭಕ್ತಾಭೀಷ್ಟದಾಯಕನೆ ||
ಶರಣು ಹೊಕ್ಕಾ ನಿನ್ನ ಧ್ಯಾನಿಪೆ |
ಕರುಣಿ ರಕ್ಷಿಸು ಎಂದು ನುತಿಸಲು |
ಕರುಣಿ ಶನಿ ದಯಹೊಂದಿ ನುಡಿದನು ಪ್ರೀತಿಮುಖನಾಗಿ || 199 ||

ಮರುಗಬೇಡೆಲೆ ನೃಪತಿ ನಿನ್ನಯ |
ಪರಮ ಭಕ್ತಿಗೆ ಮೆಚ್ಚಿದೆನು ನೃಪ |
ನೊರೆದಪನು ಆಹಾರ ನೀಡಲಿಕೆಂದು ಕರೆದುಸುರೆ ||
ಅರಸನಾಜ್ಞೆಯ ಹೊಂದಿ ಡಂಗುರ |
ವರುಹಿದರು ಇವಗುಣಿಸ ನೀಡಲು |
ಅರಸನೊಪ್ಪಿಗೆಯೆನುತ ಸಾರಿದರಾಗ ಭಟರಂದು || 200 ||

**ಮಧುಮಾಧವಿ - ತ್ರಿವುಡೆ**
ಬಂದಳಾದಾರಿಯಲಿ ತವರ್ಮನೆ |
ಯಿಂದ ಪತಿಗೃಹಕಾ ಸುಶೀಲೆಯು |
ಮುಂದೆಸೆವ ನೃಪನನ್ನು ಕಾಣುತ |
ಹೊಂದುತಚ್ಚರಿ ನಿಂದಳು || 201 ||

ಇವನಿದಾರೈ ಮುಖವ ನಿರುಕಿಸೆ |
ಭುವನ ವಿಕ್ರಮನಂತೆ ತೋರ್ಪುದು |
ಶಿವಶಿವಾ ಗತಿಯೆಂತು ಒದಗಿತು |
ಅವನಿಪತಿಯಿವ ನಿಶ್ಚಯ || 202 ||

**ಬೇಗಡೆ - ಏಕ**
ಕರುಣಸಾಗರ ಲಾಲಿಸೈ ನೃಪತಿ | ನಾ ನಿನ್ನ ಪುಜೆಯು |
ತರುಣಿ ತಾನು ಸುಶೀಲೆ ಯನ್ನ ಪತಿ ||
ಇರುವನಿಲ್ಲಿಯೆ ಬರುತ ಕಂಡೆನು |
ದೊರೆಯೆ ಕರಚರಣಂಗಳೇನಿದು |
ದುರುಳರಾರಿಂದೊದಗಿತೀ ಗತಿ |
ಪರಮ ಮಹಿಮಾನ್ವಿತನೆ ಪೇಳ್ವೆಯ || 203 ||

ಮಗಳೆ ಪೇಳುವುದೇನು ದುರ್ಗತಿಯು | ಬಂದೊದಗಿತಿಂದು |
ಸುಗುಣೆ ವಿಧಿವಶದಿಂದ ಈ ದೆಶೆಯು ||
ಬಗೆಬಗೆಯ ಉಪಕಾರ ಗೈದಿಹೆ |
ಮಿಗಿಲು ಧರ್ಮದಿ ನಡೆದೆ ಸತ್ಯದಿ |
ಅಗಜೆ ಬೇತಾಳಾದಿಗಳು ಸಹ |
ಸೊಗವನೊದಗಿಸಲಾರದಾದರು || 204 ||

ಅರಸ ನೀನಯ್ಯಂಗೆ ದೇವರಿಗೆ | ಸಮನೆಂದು ತಿಳಿದಿಹೆ |
ಕರುಣದಿಂದೈದುವುದು ಎಮ್ಮನೆಗೆ ||
ಚರಣ ಸೇವೆಯ ಗೈದು ಜನ್ಮವ |
ಪರಮ ಸಾರ್ಥಕ ಗೊಳಿಪೆನೆನ್ನಯ |
ಅರಸ ಮಾವರನೊಪ್ಪಿಸುವೆನಾ |
ತರುವೆ ಬಂಡಿಯನೇರು ತ್ವರಿತದಿ || 205 ||

**ಮಾರವಿ - ಏಕ**
ಭೂಪನ ಕರೆತರೆ ಕಾಣುತ ಮಾವನು |
ಕೋಪದಿ ಗುಡಿಗುಡಿಸಿ ||
ಪಾಪಿಯೆ ಇವನನ್ನೇತಕೆ ತಂದಿಹೆ |
ಕಾಪಾಡುವವರಾರು || 206 ||

ಕರಚರಣಿಲ್ಲದ ಹೆಳವನ ಹೊಟ್ಟೆಯ |
ಹೊರೆವವರಾರೆಲೆಗೆ ||
ಬರೆ ಮೂರ್ಖಾಟಿಕೆಗೇನಧಿಕಾರವು |
ಹೊರದಬ್ಬುವೆ ಎನಲು || 207 ||

**ಶಂಕರಾಭರಣ - ಆದಿ**
ಮಾವ ಮನ್ನಿಸೆನ್ನ ಮಾತ |
ದೇವ ವಿಕ್ರಮಾರ್ಕನೀತ |
ಭೂವರೇಣ್ಯ ಖ್ಯಾತ ಪೂತ | ನಾವು ಮಕ್ಕಳು || 208 ||

ಪರಮ ಕರುಣಿ ಧರ್ಮದಿಂದ |
ನಿರತ ಜನರ ಸಲಹುತೀರ್ದ |
ಪರಮ ಕಷ್ಟಪಡುವ ಕಾಲ | ತೊರೆದು ಬಿಸುಡಲೆ || 209 ||

ಚರಣ ಪಿಡಿದು ಬೇಡಿಕೊಂಬೆ |
ನಿರತವೆನ್ನೊಂದೂಟವಿಕ್ಕು |
ತೊರೆಯೆ ನೃಪನ ಬಿಡುವೆ ಪ್ರಾಣ | ತರುಣಿ ಪೇಳ್ದಳು || 210 ||

**ಭಾಮಿನಿ**
ಸೊಸೆಯ ಮಾತನು ಮೀರಲಾರದೆ |
ವಸುಧೆಪಾಲನ ಗಾಣ ಹೊಡೆಯಲು |
ಬೆಸಸಿದನು ರಾಮಣ್ಣ ಬಳಿಕಾ ನೃಪತಿಯೊಂದು ದಿನ ||
ವ್ಯಸನ ಕಳೆವರೆ ದೀಪರಾಗವ |
ವಸುಧೆಪತಿ ಹಾಡಲ್ಕೆ ದೀಪಗ |
ಳೆಸೆದವತಿ ಪ್ರಭೆಯಿಂದ ಮನೆಮನೆಗಳಲಿ ರಾಜ್ಯದಲಿ || 211 ||

**ಸೌರಾಷ್ಟ್ರ - ತ್ರಿವುಡೆ**
ಚಂದ್ರಸೇನನ ಪುತ್ರಿಯಾಗಿಹ |
ಚಂದ್ರಮುಖಿ ಪದ್ಮಾವತಿಯು ತಾ |
ನೊಂದು ಶಪಥವ ಗೈದು ಲಗ್ನವ | ಹೊಂದದಿರಲು || 212 ||

ದೀಪಕ ಸುರಾಗವನು ಹಾಡುತ |
ದೀಪ ಹೊತ್ತಿಸಬಲ್ಲವನೆ ಅನು |
ರೂಪ ಪತಿಯೆಂದಿರಲು ಹೊತ್ತಿದ | ದೀಪ ಕಂಡು || 213 ||

ಹೊಂದುತತ್ಯಾನಂದ ದಾಸಿಯೊ |
ಳೆಂದಳೆಲೆ ನೀ ಹೋಗು ಮಹಿಮನ |
ಕಂಡು ಎಲ್ಲಿಹನಾರವನು ತಿಳಿ | ದಿಂದು ಬಹುದು || 214 ||

ಬಂದು ಹುಡುಕುತ ದಾಸಿ ರಾಮಣ |
ನಿಂದ ತಿಳಿದೈದುತ್ತಲಾಗಲೆ |
ಎಂದಳೀ ದಿನ ಹಾಡಿದವ | ಕರಚರಣ ಹೀನ || 215 ||

ರೂಪಿಯಾಗಲಿ ಕುರುಡ ಕುಂಟ ಕು |
ರೂಪಿಯಾಗಲಿ ಗೈದ ಶಪಥ ವಿ |
ರೂಪವಾಗದು ವರಿಸದಿರಲು ಜ | ನಾಪವಾದ || 216 ||

ಕರೆದುತನ್ನಿರಿಯವನನೀಗಲೆ |
ತೆರಳಿರಂದಣ ಸಹಿತಲೆನ್ನಲು |
ತರುಣಿಯರು ನಡೆತಂದು ವಿನಯದಿ | ಎರಗುತಾಗ || 217 ||

**ಶಂಕರಾಭರಣ - ಆದಿ**
ಎಮ್ಮ ಒಡತಿ ರಾಜಪುತ್ರಿ |
ನಿಮ್ಮನೀಗ ಕರೆದು ತರಲು |
ನಮ್ಮ ಕಳುಹಿಸಿದಳು ಹೊರಡಿ | ರೆಮ್ಮ ಜತೆಯೊಳು || 218 ||

ಅಂದಣವನು ತಂದಿರುವೆವು |
ಇಂದು ಏರಿ ಕುಳಿತರೀಗ |
ಚಂದದಿಂದ ಒಯ್ವೆವಯ್ಯ | ಸಂದೆಗವ ಬಿಡು || 219 ||

ಕರೆದು ತರಲು ಕಂಡು ನೃಪಜೆ |
ಎರಗಿ ನಿಮಗಿದೇನವಸ್ಥೆ |
ಪರಮ ಮಹಿಮಾನ್ವಿತನೆ ನಿನ್ನ | ಪರಿಯ ಪೇಳ್ವೆಯ || 220 ||

**ಭಾಮಿನಿ**
ದೀಪಕ ಸುರಾಗವನು ಹಾಡಿದ |
ಪಾಪಿ ನಾನುಹದೆನ್ನ ಕಥನವ |
ರೂಪವತಿ ನೀ ಕೇಳಲಾಗದು ಎನಲು ಮಗುಳೊಮ್ಮೆ ||
ದೀಪಕ ಸುರಾಗವನು ಹಾಡಿಸೆ |
ದೀಪಗಳು ಅರಳಲ್ಕೆ ಕಾಣುತ |
ಭೂಪನಾಲಿಸಿ ಬಂದು ತರಳೆಯ ಭವನದಲಿ ಕಂಡು || 221 ||

**ಸೌರಾಷ್ಟ್ರ - ತ್ರಿವುಡೆ**
ಮಗಳೆ ಏನಿದು ನಿನ್ನ ಮರುಳಾ |
ಟಗಳು ಜನರಿದನರಿತರಾದರೆ |
ತೆಗಳುವರು ಕುಲಕತಿಶಯದ ನಿಂ | ದೆಗಳು ಬಹುದು || 222 ||

ತಾತ ಲಾಲಿಸು ದೀಪರಾಗವ |
ನೀತ ಹಾಡಿದ ಎನ್ನ ಶಪಥವ |
ರೀತಿಯವನನು ಲಗ್ನವಹೆ ಎನ | ಗೀತ ಪತಿಯು || 223 ||

ಮರುಳು ನಿನಗೇನಿನಿತು ಚೋರನು |
ಕರಚರಣವಿರಹಿತನನೊರಿಪೆಯ |
ಧರೆಯೊಳಿವನಿಂದಾವ ಸುಖ ವುಣ | ಲಿರುವೆ ನೀನು || 224 ||

**ಮಾರವಿ – ಏಕ**
ಎಲ ಎಲ ನೀಚನೆ ನೀನೆಂತಿಲ್ಲಿಗೆ |
ತಲುಪಿದೆ ಕಾಲಿರದೆ ||
ಬಲುತರ ಮಾಯಾಗಾರ ನರಾಧಮ |
ಖಳತನ ತೋರುವೆಯ || 225 ||

ಪ್ರೀತಿಯ ತೋರಿದ ಶೆಟ್ಟಿಯ ತರಳೆಯ |
ಅತುಲಾಭರಣಗಳ ||
ಘಾತಕತನದಿಂದಪಹರಿಸಿದೆಯಲ |
ನೀತಿಯೆ ಪೇಳ್ ಖಳನೆ || 226 ||

ಕರಚರಣಂಗಳ ಕಡಿಸಿದೆನಾದರು |
ದುರುಳತ್ವವ ಬಿಡದೆ ||
ತರಳೆಯ ಅಂತಃಪುರಕೈತಂದೆಯ |
ಮರಣವೆ ಗತಿ ನಿನಗೆ || 227 ||

ಯಾರೆಲೆ ಕಟುಕರೆ ಸೂರ್ಯೋದಯದಲಿ |
ಶಿರವರಿದೀ ಖಳನ ||
ತೋರಣವಿಕ್ಕಿರಿ ಪುರಹೊರದ್ವಾರದಿ |
ಊರವರರಿವಂತೆ || 228 ||

**ಕಂದ**
ಧರಣಿಪ ತೆರಳಲ್ಕಿತ್ತಲು |
ತರಳೆಯು ಪರಿತಪಿಸಿದಳತಿ ದುಃಖಿದಿ ತನುವಂ ||
ಮರೆದೊರಗಲಿಕಿತ್ತಲು ನೃಪ |
ಮರುಗಿದ ಇನಜನ ಪರಿಪರಿ ನುತಿಸುತಲಾಗಂ || 229 ||

**ನೀಲಾಂಬರಿ - ಏಕ**
ಕೇಳು ತರಣಿಜ ಪರಮ ಪಾವನ |
ತಾಳಲಾರೆನು ದೇವ ಕಷ್ಟವ ||
ಬಾಳಲಾರೆನು ಭಾನುನಂದನ |
ಕೋಳು ಹೋದೆನು ನಿನ್ನ ನಿಂದಿಸಿ || 230 ||

ಕ್ಷೋಣಿಪಾಲಕ ತಿರುಕನಾದೆನು |
ಮಾನ ಹೋಯಿತು ಊನವಾಯಿತು ||
ಪ್ರಾಣಕೀಗಲು ಸಂಚಕಾರವು |
ಕಾಣೆ ದೇವನೆ ಉಳಿವ ಮಾರ್ಗವು || 231 ||

ಎನ್ನಿಂದಾಗದು ಬನ್ನ ಬಡುವರೆ |
ನಿನ್ನನೀಗಲೆ ಮರೆಯ ಹೊಕ್ಕಿಹೆ ||
ಇನ್ನು ಕಾಡದೆ ಪುಣ್ಯಪುರುಷನೆ |
ಎನ್ನ ಮನ್ನಿಸಿ ಕಾಯೊ ದೇವನೆ || 232 ||

**ಭಾಮಿನಿ (ಅರ್ಧ)**
ಎನುತ ಮಮ್ಮಲ ಮರುಗಿ ನುತಿಸುವ |
ಜನಪತಿಗೆ ಮೈದೋರಿ ತರಣಿಜ |
ಜನಪ ದುಃಖಿಸಬೇಡವೆನೆ ಎರಗುತ್ತ ನೃಪನೆಂದ || 233 ||

**ಚೂರ್ಣಿಕೆ**
ಸಕಲ ಚರಾಚರ ಸುಖ ಸಂಕಷ್ಟ ನಿವಾರಣ ಕಾರಣಂ |
ಅಕಳಂಕ ಚರಿತ ಸರ್ವ ಗುಣಾಯುತ ಸುನೀಲಕಾಯಂ ||
ಸುಖ ಸೌಭಾಗ್ಯದಿ ಸಕಲ ಸಂಪತ್ಪ್ರದಾಯಕಂ |
ಭಕುತಜನಾವಳಿ ವಿಕಸಿತ ಆನತಜನ ಪರಿಪಾಲಕಂ || 234 ||

ಕಮಲಸಖ ಸೌಕುಮಾರಂ ಛಾಯಜ ವಾಯಸಗಮನಂ |
ಕಮನೀಯಂ ಗುಣಾರ್ಣವ ನಿರುಪಮ ಕಲಿಕಲ್ಮಶಹರಂ |
ಸುಮನಸವಂದಿತ ಭಾಸ್ಕರಪುತ್ರ ವರಕರುಣಾಕರಂ |
ನಮಿಪೆಂ ಶ್ರೀ ಶನಿದೇವಂ ನಮಸ್ತೇ ನಮಸ್ತೇ ಶುಭದಂ || 235 ||

**ದೇಶಿ – ಅಷ್ಟ**
ವಿಕ್ರಮಾರ್ಕನೆ ಕೇಳು ಮಾತ | ನೀ |
ಶಕ್ರ ಸಮಾನ ವಿಖ್ಯಾತ ||
ನಕ್ರನ ಬಾಯೊಳು ಸಿಕ್ಕಾನೆಯಂದದಿ |
ಲೆಕ್ಕವಿಲ್ಲದ ಕಷ್ಟ | ಕಿಕ್ಕಿದೆ ವರ ಬೇಡು || 236 ||

ಲಾಲಿಸಬೇಕು ಜೀಯ | ಸೂರ್ಯ |
ಬಾಲ ಕರುಣಿ ಶನಿರಾಯ ||
ಭೂಲೋಕದ ಜನ ತಾಳಲಾರರು ಕಷ್ಟ |
ಶೀಲ ನೀನೀ ತೆರ | ಕಾಡಲಾಗದು ದೇವ || 237 ||

ಮೆಚ್ಚಿದೆ ನಾ ನಿನ್ನ ನುಡಿಗೆ | ಬಲು |
ಹೆಚ್ಚಿನ ಗುಣಗಣಗಳಿಗೆ ||
ತುಚ್ಛತನದ ಬಾಳು ಕಷ್ಟ ನಿವೃತ್ತಿಯ |
ಸಚ್ಚರಿತನೆ ಗೈವೆ | ನಿಶ್ಚಯವಿದು ನಂಬು || 238 ||

ಕರುಣದಿ ನಿನ್ನ ಕಾಯುವೆನು | ಇದೊ |
ಕರಪಾದಗಳನೊದಗಿಪೆನು ||
ಮರಣ ಶಿಕ್ಷೆಯ ಪರಿಹರಿಸುವೆ ಮೊದಲಿನ |
ಪರಿಗಿಂತ ಮಿಗಿಲಾಗಿ | ನೆರೆ ಮೆರೆಸುವೆ ಕೇಳು || 239 ||

ಎನ್ನಯ ಮಹಿಮೆಯನಿದನು | ಅ |
ನನ್ಯಭಾವದೊಳೋದುವವನು ||
ಎನ್ನ ನೋಡುತ ನಲಿ | ದೆನ್ನ ಭಜಿಸುವನ |
ಬನ್ನವ ಬಿಡಿಸುವೆ | ಉನ್ನತಿಗೊಳಿಸುವೆ || 240 ||

**ವಾರ್ಧಕ**
ಎನುತಲಂತರ್ಧಾನವಾಗೆ ಕರಚರಣಗಳು |
ಪುನರುದಿಸೆ ಪುರದರಸನಿಗೆ ಸ್ವಪ್ನದಲ್ಲಿ ವರ |
ಶನಿದೇವನೆಲ್ಲವಂ ತಿಳುಹಿಸಲ್ ಕಳವಳಿಸಿ ಬಂದು ನೃಪ ಕ್ಷಮೆ ಬೇಡಿದ ||
ಮನುಜಪತಿಯೊಡಗೂಡಿ ವಣಿಕನಲ್ಲಿಗೆ ತೆರಳೆ |
ಜನರಿದಿರು ಉಗುಳೆ ಆಭರಣವೆಲ್ಲವ ಹಂಸ |
ವಣಿಕ ನೃಪತಿಯ ಪಾದಕೆರಗಿ ಮಗಳೊಪ್ಪಿಸಿದ ನೆರೆದ ಜನ ತೋಷಪಡಲು || 241 ||

**ಸೌರಾಷ್ಟ್ರ - ತ್ರಿವುಡೆ**
ತರಳೆಯನು ಸಂತೈಸಿ ಧರಣಿಪ |
ನೆರಹಿದನು ವೈವಾಹ ವಿಕ್ರಮ |
ತೆರಳಿ ಬಂದಿಹ ತುರಗವೇರುತ | ಪುರಕೆ ಪೊರಟ || 242 ||

ಪರಮ ಸೇನಾಪತಿಯು ದುರ್ಜಯ |
ಅರಸ ವಿಕ್ರಮನಳಿದ ತಾನೇ |
ಅರಸ ರಾಣಿಯನೊರಿಪೆನೆನ್ನುತ | ಭರದಿ ಬಂದು || 243 ||

ರಾಣಿ ಲಾಲಿಸು ವಿಕ್ರಮಾರ್ಕನು |
ಪ್ರಾಣಸಹಿತುಳಿದಿಲ್ಲ ಯೌವನ |
ನೀನು ಕೆಡಿಸಲದೇಕೆ ಎನ್ನಯ | ರಾಣಿಯಾಗು || 244 ||

ಕೇಳು ಉಂಡ ಮನೆಗೆನೆ |
ಹಾಳು ಬಗೆದರೆ ದೇವ ಮೆಚ್ಚನು |
ಆಳಿದನ ಸತಿ ತಾಯಿ ಸಮವೆಂ | ಬುದನು ಮರೆತೆ || 245 ||

ಪೊಡವಿಯೊಡೆತನ ದೊರೆತ ಮೇಲಕೆ |
ಒಡೆಯನಲ್ಲವೆ ರಾಜ ಸಂಪದ |
ಮಡದಿ ಸಹಿತೆನಗೊದಗಬೇಕೆಂ | ದುಡಕಿ ಪೇಳ್ದ || 246 ||

ತರುಣಿಯೊಪ್ಪಿದರೊಳಿತು ನಿನ್ನನು |
ನೆರೆ ಬಲಾತ್ಕಾರದಲಿ ಪೊಂದದೆ |
ಇರಲು ದುರ್ಜಯನಲ್ಲವೆನುತಲಿ | ತುರುಬ ಪಿಡಿಯೆ || 247 ||

**ಭಾಮಿನಿ**
ಹರಹರಾ ವರ ಧರ್ಮದೇವತೆ |
ಗಿರಿಜೆ ಬೇತಾಳಾದಿಗಳೆ ನಿಮ |
ಗರಿಕೆಯಾಗದೆ ದುಷ್ಟನಿವನಿಂ ಬಿಡಿಸಿರೆಂದೆನುತ ||
ಮರುಗಿ ಮೊರೆಯಿಡುತಿರಲಿಕಾಕ್ಷಣ |
ಧರಣಿಪಾಲಕ ವಿಕ್ರಮಾರ್ಕನು |
ಭರದೊಳೋಡುತ ಬಂದು ನಿಂದಾ ದುರ್ಜಯನಿಗೆಂದ || 248 ||

**ಮಾರವಿ - ಏಕ**
ಮರುಳು ಖಳಾಧಮ ನೀಚ ದುರಾತ್ಮಕ |
ನೆರೆ ಪಾಪಿಯೆ ದ್ರೋಹಿ ||
ಧರಣಿಯ ಒಡೆತನಕಾಶಿಸಿ ರಾಣಿಯ |
ನೆರೆ ಪೀಡಿಸುತಿಹೆಯ || 249 ||

ಸಿಕ್ಕಿದ ಅಧಿಕಾರಾವಧಿಯೊಳು ನೀ |
ಸೊಕ್ಕಿದೆಯಲ ಪಾಪೀ ||
ರಕ್ಕಸಕಾರ್ಯಕೆ ಮನವೆಳಸಿದೆಯಲ |
ದಕ್ಕುವುದುಂಟೆನೋ || 250 ||

ಎನುತಲಿ ಚಂದ್ರಾಯುಧವನು ಝಳಪಿಸಿ |
ಮನುಜಾಧಿಪನಾಗ ||
ಸೈನ್ಯಾಧೀಶನ ತನುವಂ ಸೀಳಿದ |
ವನಿತೆಯನಪ್ಪಿದನು || 251 ||

**ಭಾಮಿನಿ**
ಕೇಳು ಮಾನಿನಿ ನಿನ್ನ ಪುಣ್ಯದಿ |
ಹಾಳು ಕಾಲವು ಸಂದಿತಿಂದಿಗೆ |
ಮೇಲನೊದಗಿಪ ಮಂದನಭಯವನಿತ್ತಿಹನು ಎನಗೆ ||
ಈ ಲಲನೆಯರ ಕೂಡಿ ತೋಷದಿ |
ಬಾಳುವರೆ ಮನಮಾಡು ನೀನೆನೆ |
ಲೋಲನಯನೆಯು ನಿಮ್ಮ ಸುಖವೇ ತನ್ನದೆನೆ ಕೇಳಿ || 252 ||

ಭೂಲಲಾಮನು ತೋಷದಿಂ ಬಹು |
ಕಾಲ ರಾಜ್ಯವನಾಳ್ದ ಕಥನವ |
ಲೀಲೆಯಿಂ ರಚಿಸಿದೆನು ಶನಿ ದಯದಿಂದ ಪೊಸತೆನಿಸೀ ||
ಹಾಳು ಕವಿತೆಯನೋದಲೇನಿದೆ |
ಬಾಳು ಸಾರ್ಥಕಮಪ್ಪುದಿದು ಕವಿ |
ಲೋಲ ಸೀತಾನದಿಯ ಗಣಪಯ ಶೆಟ್ಟಿ ವಿರಚಿತವು || 253 ||

**ಮಂಗಲ ಪದ**

ಮಂಗಲಂ | ಜಯ ಮಂಗಲಂ || ಪ ||
ಮಂಗಲ ತರಣಿ ಸಂಕಾಶನಿಗೆ |
ಮಂಗಲ ಪದುಮಸಖಾತ್ಮಜಗೆ |
ಮಂಗಲ ಕೋಪಿಸೆ ಕಂಗೆಡಿಸುವಗೆ |
ಮಂಗಲದೇವ ಶನೀಶ್ವರಗೆ || ಮಂಗಲಂ ||
ಮಂಗಲ ಮಾಧವ ಪ್ರಿಯಕರಗೆ |
ಮಂಗಲ ನೀಲಶರೀರನಿಗೆ ||
ಮಂಗಲ ಸುಮನಸ ವಂದಿತಗೆ |
ಮಂಗಲ ಸಂಪದದಾಯಕಗೆ |
ಮಂಗಲ ವರ ಕೃಪಾಕರಗೆ |
ಮಂಗಲ ಕಲಿಕಶ್ಮಲಹರಗೆ ||
ಮಂಗಲಂ | ಜಯ | ಮಂಗಲಂ || 254 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಸುಬೋಧ ಸಾಹಿತ್ಯ ಭಂಡಾರ, ಹಿರಿಯಡಕ

**ಪ್ರಸಂಗ ಪ್ರತಿ ಆಧಾರ:** ಸುಬೋಧ ಸಾಹಿತ್ಯ ಭಂಡಾರ, ಹಿರಿಯಡಕ ಇವರಿಂದ ೧೯೭೭ರಲ್ಲಿ ಪ್ರಕಟಿತ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ರವಿ ಮಡೋಡಿ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಅನಿತಾ ರಾವ್

**ಅಂತರಜಾಲ ಪ್ರತಿ ವಿನ್ಯಾಸ:** ದಿನೇಶ ಉಪ್ಪೂರ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ